بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 02

ಸಂಚಿಕೆ: 08

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**25 ಫೆಬ್ರವರಿ 2021, 25 ತಬ್‌ಲೀಗ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 12 ರಜಬ್ 1442 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَیِّدْ اِمَامَنَا بِرُوْحِ الْقُدُسِ وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَالَّذِیْنَ اٰمَنُوْا بِاللّٰهِ وَرُسُلِهٖ وَلَمْ یُفَرِّقُوْا بَیْنَ اَحَدٍ مِّنْهُمْ اُولٰٓئِكَ سَوْفَ یُؤْتِیْهِمْ اُجُوْرَهُمْ

*(ಅನ್ನಿಸಾಅ್:153)*

**ಅಂದರೆ: ಅಲ್ಲಾಹನನ್ನೂ ಅವನ (ಎಲ್ಲ) ಸಂದೇಶವಾಹಕರನ್ನೂ ನಂಬಿ, (ನಂಬಿಕೆಯ ವಿಚಾರದಲ್ಲಿ) ಅವರ ಮಧ್ಯೆ ಯಾರಲ್ಲೂ ವ್ಯತ್ಯಾಸ ಮಾಡದವರಾರೋ, ಅವರಿಗೆ ಅವರ ಪ್ರತಿಫಲವನ್ನು ಅವನು ಶೀಘ್ರದಲ್ಲೇ ನೀಡುವನು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಹಝ್‌ರತ್ ರಸೂಲುಲ್ಲಾಹ್(ಸ) ರವರ ಒಂದು ಪ್ರಿಯವಾದ ದುಆ**

(1120) ಹಝ್‌ರತ್ ಇಬ್ನು ಅಬ್ಬಾಸ್ (ರ) ವರದಿ ಮಾಡುತ್ತಾರೆ, ನಬಿ(ಸ) ರಾತ್ರಿ ತಹಜ್ಜುದ್ ನಮಾಝ್ ನಿರ್ವಹಿಸಬೇಕಾದರೆ ಈ ದುಆ ಮಾಡುತ್ತಿದ್ದರು.

ಓ ಅಲ್ಲಾಹ್! ನಾನು ನಿನ್ನ ಮುಂದೆ ತಲೆ ಬಾಗಿರುತ್ತೇನೆ. ಮತ್ತು ನಿನ್ನ ಮೇಲೆ ವಿಶ್ವಾಸ ತಂದಿರುತ್ತೇನೆ ಮತ್ತು ನಿನ್ನ ಮೇಲೆಯೇ ನಾನು ಭರವಸೆ ಹೊಂದಿರುತ್ತೇನೆ. ನಿನ್ನ ಮುಂದೆ ಬಾಗುತ್ತೇನೆ ಮತ್ತು ನಿನ್ನಗೋಸ್ಕರವೇ ಈ ಭಾರ ಸ್ವೀಕರಿಸಿರುತ್ತೇನೆ. ನಿನ್ನಿಂದಲೇ ನಿರ್ಣಯ ಬಯಸುತ್ತೇನೆ. ನನ್ನನ್ನು ಕ್ಷಮಿಸು. ಆದಿಯಲ್ಲಾಗಲಿ, ಅಂತ್ಯದಲ್ಲಾಗಲಿ, ನಾನು ಮಾಡಿದ ಕರ್ಮಗಳು ಮತ್ತು ಗೌಪ್ಯವಾಗಿ ಹಾಗೂ ಬಹಿರಂಗವಾಗಿ ಮಾಡಿದ ನನ್ನ ಕರ್ಮಗಳಿಗೆ, ನೀನೇ ಆದಿ ಮತ್ತು ನೀನೇ ಅಂತ್ಯ. ನಿನ್ನ ಹೊರತು ಯಾರೂ ಆರಾಧ್ಯನಲ್ಲ ಅಥವಾ ಹೇಳುತ್ತಿದ್ದರು. ನಿನ್ನ ಹೊರತು ಯಾರೂ ಆರಾಧ್ಯನಲ್ಲ.

**(ಸಹೀ ಬುಖಾರಿ ಸಂಪುಟ-2, ಕಿತಾಬುಲ್ ತಹಜ್ಜುದ್, ಪುಟ 510)**

## ದೇವನೊಂದಿಗೆ ಮೈತ್ರಿಮಾಡಿಕೊಳ್ಳಿ, ನಿಜವಾದ ಭಕ್ತಿಯಿಂದ ವರ್ತಿಸಿರಿ ಆಕಾಶವು ಅಸಾಮಾನ್ಯ ದುರಂತಗಳಿಂದ ಎಚ್ಚರಿಸುತ್ತಿದೆ, ಭೂಮಿಯು ನಾನಾ ರೋಗಗಳಿಂದ ಎಚ್ಚರಿಸುತ್ತಿದೆ, ಅದನ್ನು ಅರಿಯುವವನು ಭಾಗ್ಯಶಾಲಿ.

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ದುಆ (ಪ್ರಾರ್ಥನೆ)ಗಳ ಅನುಗ್ರಹಗಳು

ದುಆ (ಪ್ರಾರ್ಥನೆ) ಇಲ್ಲದಿರುತ್ತಿದ್ದರೆ ಮನುಷ್ಯನು ದೇವನಿದ್ದಾನೆಂಬ ದೃಢ ವಿಶ್ವಾಸದವರೆಗೆ ತಲುಪಲು ಸಾಧ್ಯವಾಗುತ್ತಿರಲಿಲ್ಲ. ದುಆದಿಂದಲೇ ದೇವವಾಣಿ ಲಭಿಸುತ್ತದೆ. ದುಆ ಮಾತ್ರ ಅಲ್ಲಾಹನೊಂದಿಗೆ ಮಾತನಾಡುವ ಮಾಧ್ಯಮವಾಗಿದೆ. ಮನುಷ್ಯನು ಆತ್ಮಪೂರ್ವಕವಾಗಿ, ನಿಷ್ಠೆಯಿಂದ, ಏಕತ್ವ, ಪ್ರೀತಿ, ಸಜ್ಜನಿಕೆ ನಿಷ್ಠೆಯಿಂದ ಪ್ರಾರ್ಥನೆ (ದುಆ) ಮಾಡುವವನಾದರೆ ಅವನು ತನ್ನ ಅಸ್ತಿತ್ವ ಕಳೆದುಕೊಳ್ಳುವ ಸ್ಥಿತಿಗೆ ತಲುಪಬಹುದಾಗಿದೆ. ಆಗ ಜನರ ದೃಷ್ಟಿಯಿಂದ ಗೌಪ್ಯವಾಗಿರುವ ಆ ದೇವನು ಅವನ ಮೇಲೆ ಪ್ರಕಟಗೊಳ್ಳುವನು. ಅದನ್ನು ಅರಿಯುವವನು ಭಾಗ್ಯಶಾಲಿಯಾಗುವನು. ದೇವನೊಂದಿಗೆ ಮೈತ್ರಿ ಮಾಡಿಕೊಳ್ಳಿ, ನಿಜವಾದ ಭಕ್ತಿಯಿಂದ ವರ್ತಿಸಿರಿ, ಆಕಾಶದಿಂದ ಅಸಾಮಾನ್ಯ ದುರಂತಗಳು ಎಚ್ಚರಿಸುತ್ತಿವೆ. ಭೂಮಿಯಿಂದ ನಾನಾ ರೋಗಗಳು ಎಚ್ಚರಿಸುತ್ತಿವೆ. ಅದನ್ನು ಅರಿಯುವವನು ಭಾಗ್ಯಶಾಲಿಯಾಗುವನು.

### ಅಸಾಮಾನ್ಯ ಧೈರ್ಯ ಮತ್ತು ಸಾಹಸ

ಧೈರ್ಯ ಕಳಕೊಳ್ಳಬಾರದು, ಸಾಹಸವು ಉತ್ತಮಗುಣಗಳಲ್ಲಿ ಒಂದಾಗಿದೆ, ಸತ್ಯವಿಶ್ವಾಸಿಯು ಧೈರ್ಯಶಾಲಿಯಾಗಿರುವನು, ಯಾವಾಗಲೂ ಧರ್ಮ ಸೇವೆ ಮತ್ತು ಸಹಕಾರಕ್ಕಾಗಿ ಸಿದ್ಧನಾಗಿರಬೇಕಾಗಿದೆ ಮತ್ತು ಎಂದೂ ಪುಕ್ಕಲುತನ ತೋರಿಸಬಾರದು. ಪುಕ್ಕಲುತನವು ಕಪಟವಿಶ್ವಾಸಿಯ ಚಿಹ್ನೆಯಾಗಿದೆ, ಸತ್ಯವಿಶ್ವಾಸಿಯು ಧೈರ್ಯಶಾಲಿ ಹಾಗೂ ಸಾಹಸಿಯಾಗಿರುತ್ತಾನೆ. ಧೀರತೆಯ ಅರ್ಥ ಏರುಧನಿಯಲ್ಲಿ ಅನುಚಿತವಾಗಿ ಮಾತನಾಡುವುದಲ್ಲ. ಅನುಚಿತವಾಗಿ ಮಾತನಾಡುವುದೆಂದರೆ ಅದು ಮೂರ್ಖತನ ಎಂದಾಗುತ್ತದೆ. ಸತ್ಯವಿಶ್ವಾಸಿಯಲ್ಲಿ ಕೋಪವಿರುವುದಿಲ್ಲ. ಬದಲು ಚತುರತೆ ಹಾಗೂ ತಾಳ್ಮೆ ವಹಿಸಿದವನಾಗಿರುತ್ತಾನೆ. ಮತ್ತು ಧರ್ಮಸೇವೆಗಾಗಿ ಸಿದ್ಧನಾಗಿರುತ್ತಾನೆ ಮತ್ತು ಪುಕ್ಕಲನಾಗಿರುವುದಿಲ್ಲ. ಕೆಲವೊಮ್ಮೆ ದೇವನ ಅಸಂತುಷ್ಟಿಗೆ ಕಾರಣವಾಗುವಂತಹ ಕಾರ್ಯ ಮನುಷ್ಯನಿಂದ ಆಗಿಬಿಡುತ್ತದೆ. ಉದಾಹರಣೆಗೆ ಭಿಕ್ಷುಕನಿಗೆ ಗದರಿಸುವುದು ಅದು ದಬ್ಬಾಳಿಕೆ ಎಂದಾಗುತ್ತದೆ. ಅದು ದೇವನ ಅಸತುಂಷ್ಟಿಗೆ ಕಾರಣವಾಗುತ್ತದೆ, ಏನೂ ಕೊಡಲು ಭಾಗ್ಯ ದೊರೆಯದಿದ್ದರೂ ಅವನು ವಿನಯದಿಂದ ಅಥವಾ ನೀತಿಯಿಂದ ವರ್ತಿಸುವುದಾದರೆ, ನೀರು ಮಾತ್ರ ಏಕಾಗಬಾರದು. ಕೊಟ್ಟರೆ ಅದು ಅವನ ದೇವಕೃಪೆಗೆ ಕಾರಣವಾಗಬಹುದು.

**(ಮಲ್ಫೂಝಾತ್ ಸಂಪುಟ-1, ಪುಟ 265-266, ಮುದ್ರಣ ಖಾದಿಯಾನ್ 2018)**

## ಮಿಥ್ಯ ದೇವರುಗಳ ಕಾಲ ಸೀಮಿತವಾಗಿವೆ. ಆದರೆ ಅಲ್ಲಾಹನ ಕಾನೂನುಗಳು ಅನಾದಿಯಿಂದ ನಡೆದುಕೊಂಡು ಬರುತ್ತಿವೆ. ಅಂದ ಹಾಗೆ ನಿಯಮಿತವಾಗಿ ಶಾಶ್ವತ ರೂಪದಲ್ಲಿ ನಡೆದುಕೊಂಡು ಬರುವಂತಹ ಕಾರ್ಯಗಳು ಮಿಥ್ಯ ದೇವರುಗಳಿಗೆ ಹೋಲಿಸಲಾಗುವುದಿಲ್ಲ.

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಯೂನುಸ್ ವಚನ 35 **ಖುಲಿಲ್ಲಾಹು ಯಬ್ದ ಉಲ್ ಖಲ್‌ಖ ಸುಮ್ಮ ಯುಈದುಹೂ ಫಿನ್ನಾ ತುಫಕೂನ್** ವ್ಯಾಖ್ಯಾನ ಮಾಡುತ್ತ ಹೇಳಿದರು.

"ಈ ವಚನದಲ್ಲಿ ಬಹುದೇವಾರಾಧನೆ ರದ್ದುಪಡಿಸಲು ಒಂದು ಉತ್ತಮ ಸಾಕ್ಷ್ಯ ನೀಡಲಾಗಿದೆ. ಅದನ್ನು ಸಾಮಾನ್ಯವಾಗಿ ಜನರು ಅರ್ಥ ಮಾಡಿಕೊಳ್ಳುವುದಿಲ್ಲ. ಅಲ್ಲಾಹನು ಹೇಳಿದನು. ಸೃಷ್ಟಿಯ ಸಾಕ್ಷಿ ಅದರ ಮರುಳುವಿಕೆಯಾಗಿರುತ್ತದೆ. ಅಂದರೆ ಸೃಷ್ಟಿಯ ಪುನರಾವರ್ತನೆ ಇಲ್ಲವಾಗಿದ್ದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ನಾನು ಸೃಷ್ಟಿಕರ್ತ ಎಂಬ ವಾದ ಮಂಡಿಸಬಹುದಾಗಿದೆ. ಇಂದು ಯಾವುದೇ ವ್ಯಕ್ತಿ ಲೋಕವನ್ನು ನಾನು ಸೃಷ್ಟಿಸಿದ್ದೇನೆ ಎಂದು ಹೇಳುವುದಾದರೆ, ಅವನನ್ನು ನಿರುತ್ತರಗೊಳಿಸಬೇಕಾಗಿದೆ, ಇನ್ನೊಮ್ಮೆ ಸೃಷ್ಟಿಸಿ ತೋರಿಸಿ ಎನ್ನಬೇಕು. ಅಂತೂ ಮರುಳುವಿಕೆ, ಪುನರಾವರ್ತನೆ ಕರ್ಮವು ದೇವತ್ವ ಹೊಂದುವ ಸಾಕ್ಷ್ಯವಾಗಿದೆ. ಆದುದರಿಂದ ನಾವು ಕೇವಲ ಸೃಷ್ಟಿಯನ್ನು ಪ್ರಸ್ತುತಪಡಿಸುವುದಿಲ್ಲ. ಅದು ಹಝುರತ್ ಈಸಾ(ಅ) ಅಥವಾ ಇನ್ನಾರೂ ಸೃಷ್ಟಿಸಿದ್ದಾರೆನ್ನುವ ಬದಲು ಅದನ್ನು ಪುನರಾವರ್ತಿಸಲು ಹೇಳುತ್ತೇವೆ. ಪುನರಾವರ್ತನೆಯಲ್ಲಿ ಎರಡು ವಿಷಯಗಳಿರುತ್ತವೆ, ಮೊದಲು ತಕ್ಷಣ ಪರೀಕ್ಷೆಯಿರುತ್ತದೆ. ಎರಡನೆಯದಾಗಿ ಪುನರಾವರ್ತನೆಯ ಅನಾದಿ ಕಾನೂನು ಸಿದ್ಧವಿರುತ್ತದೆ. ಉದಾಹರಣೆಗೆ ದಾನ್ಯದಿಂದ ದಾನ್ಯ ಉತ್ಪಾದನೆಯಾಗುತ್ತ ಹೋಗಿದೆ. ಒಬ್ಬನು ಇಂದು ದೇವನಾಗಿಬಿಟ್ಟರೆ, ಸೃಷ್ಟಿಕರ್ತನು ದಾವೆ ಹೂಡಿದರೆ, ಅವನಿಗೆ ಹೇಳಬಹುದಾಗಿದೆ. ದಾನ್ಯವಂತೂ ಮೊದಲಿನಿಂದ ಉತ್ಪಾದನೆಯಾಗುತ್ತ ಬಂದಿದೆ. ನೀವು ಈಗ ಹುಟ್ಟಿದ್ದೀರಿ. ಅಂತೂ ಮಿಥ್ಯ ದೇವರುಗಳು ಸೀಮಿತ ಕಾಲ ಹೊಂದಿವೆ. ಆದರೆ ಅಲ್ಲಾಹನ ಕಾನೂನುಗಳು ಆದಿಯಿಂದ ನಡೆದುಕೊಂಡು ಬರುತ್ತಿವೆ. ಆದುದರಿಂದ ಹೇಳಬಹುದು. ಅಲ್ಲಾಹನ ಕಾನೂನುಗಳು ಒಂದು ನಿಯಮಿತ ರೀತಿಯಲ್ಲಿ ಶಾಶ್ವತ ರೂಪದಲ್ಲಿ ನಡೆದುಕೊಂಡು ಬರುವಂತಹ ಕಾರ್ಯಗಳು ಮಿಥ್ಯ ದೇವರುಗಳಿಗೆ ಹೋಲಿಸಲಾಗುವುದಿಲ್ಲ. ಅಂದ ಹಾಗೆ ಈ ಸೃಷ್ಟಿ ಮತ್ತು ಅದರ ಪುನರಾವರ್ತನೆಯ ನಿಯಮ ಮಾಡಿದ್ದು ಯಾರು? ಅಲ್ಲಾಹನೆಂದು ಹೇಳುವುದಾದರೆ ನೀವೇ ಹೇಳಿ. ಅಲ್ಲಾಹನು ಅನಾದಿಯಿಂದ ಸೃಷ್ಟಿಯ ಕೆಲವು

**(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)**

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ರಿಸಾಲ ಕರಾಮತುಸ್ಸಾದಿಖೀನ್‌ನ ಪ್ರತಿರೂಪ ಬರೆಯಲು ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಅವರಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ಘೋಷಣೆ

ಮುಹಮ್ಮದ್ ಹುಸೇನ್ ಬಟಾಲ್ವಿ ಅವರು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕುರಿತು ಸುಳ್ಳು ಆರೋಪದಿಂದ ಕೂಡಿದ ಒಂದು ಪ್ರಬಂಧ ತನ್ನ ಪತ್ರಿಕೆಯಾದ "ಇಶಾಅತುಸ್ಸುನ್ನ" ಸಂಪುಟ 15, ಸಂಖ್ಯೆ 1, ಜನವರಿ 1893 ರಲ್ಲಿ ಪ್ರಕಟಿಸಿದರು. ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ.... ಅವರ ಯಾವ ಬರಹವು ಸುಳ್ಳಲ್ಲದೆ ಬೇರೇನಲ್ಲ" ಎಂಬ ಆರೋಪವನ್ನು ಹಚ್ಚಿದರು. ಅವರ ಭವಿಷ್ಯವಾಣಿ ಸತ್ಯವಾಗಲಿಲ್ಲ. ಆದುದರಿಂದ ಅವರಿಗೆ, ದೇವವಾಣಿ ಲಭಿಸಿತು. ವಲಿ, ಮುಹದ್ದಿಸ್ ಎಂದು ಹೇಳಲು ಸಾಧ್ಯವಿಲ್ಲ. ಜಮಾಅತಿನ ಹೆಸರು ಅಜ್ಞಾನಿ ಹಾಗೂ ಜಮಾತಿನ ಸದಸ್ಯರು ಮೂಢರು ಎಂದು ಹೆಸರಿಸಿದರು ಮತ್ತೆ ಬರೆದರು. ಅವರ ಕೆಲ ಶಿಷ್ಯಂದಿರು ಸರಾಯಿ ಕುಡಿಯುತ್ತಾರೆ. ಅವರನ್ನು ಸುಳ್ಳುಗಾರ, ದಜ್ಜಾಲ್ ಮತ್ತು ಮಿಥ್ಯವಾದಿ ಎಂದರು ಮತ್ತು ಬರೆದರು. ಅವರ ಕಣ ಕಣದಲ್ಲಿ ಸುಳ್ಳು ಸೇರಿದೆ. ಅಲ್ಲದೇ ಹಜ್‌ರತ್ ಮಸೀಹ್ ಮೌಊದ್(ಅ) ರವರ ದೃಷ್ಟಾಂತಗಳನ್ನು ನೋಡಿ ಹೇಳಿದರು. ಅಲ್ಲಾಹನು ಎಂದಾದರೂ ಸುಳ್ಳುಗಾರರಿಗೆ ಸಹಕರಿಸಿದ್ದುಂಟೆ? ಮತ್ತು ಅವರ ದೃಷ್ಟಾಂತಗಳನ್ನು ಮಾಯಮಾಟ ಮತ್ತು ಮೋಸದಿಂದ ಪ್ರಕಟವಾಗುವ ದೃಷ್ಟಾಂತಗಳಾಗಿವೆ ಎಂದರು.

ಅದರ ಉತ್ತರವಾಗಿ ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

"ನೆನಪಿರಲಿ ಈ ಆರೋಪಗಳು ಹೊಸದೇನೂ ಅಲ್ಲ. ಎಷ್ಟೆಲ್ಲ ಅಲ್ಲಾಹನ ಸಜ್ಜನ ದಾಸರು ಲೋಕದಲ್ಲಿ ಬಂದಿರುವರೋ, ದುಷ್ಟರು ಅವರ ಮೇಲೆ ಇಂತಹುದೇ ಆರೋಪಗಳನ್ನು ಹಚ್ಚಿರುವವರು. ಇಮಾಮರು ಸುಳ್ಳುಗಾರರಾಗಿದ್ದಾರೆ, ಮಿಥ್ಯವಾದಿಗಳಾಗಿದ್ದಾರೆ, ವ್ಯಭಿಚಾರಿಗಳಾಗಿದ್ದಾರೆ, ಲೂಟಿಕೋರರಾಗಿದ್ದಾರೆ ಎಂದು, ಆದರೆ ಲೋಕವು ಇವೆರಡರಲ್ಲಿ ವ್ಯತ್ಯಾಸ ಕಂಡು ಹಿಡಿಯದಿದ್ದಾಗ ಅಂತಿಮವಾಗಿ ಪಾತಾಳದವರೆಗೆ ದೃಷ್ಟಿಯುಳ್ಳವನಾದ ಆ ದೇವನು ತನ್ನ ದೈವಿಕ ದೃಷ್ಟಾಂತಗಳ ಮೂಲಕ ಯಾರು ಸುಳ್ಳುಗಾರನು ಮತ್ತು ಯಾರು ಸತ್ಯವಂತನು ಎಂದು ತೋರಿಸಿಕೊಟ್ಟನು. (ಆಯಿನಾ ಕಮಾಲಾತೆ ಇಸ್ಲಾಂ, ರೂಃಆನಿ ಖಝಾಇನ್, ಸಂಪುಟ-5, ಪುಟ-597)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಮುಹಮ್ಮದ್ ಹುಸೇನ್ ಬಟಾಲ್ವಿ ಹೇಳುತ್ತಿರುವುದೆಲ್ಲ ಅದು ಅವರ ಅಹಂಕಾರ ಕಾರಣಗಳಿಂದಾಗಿದೆ. ಅವರು ತನ್ನನ್ನು ಆಲಿಮ್ (ಪಂಡಿತ್) ಮತ್ತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹಾಗೂ ಅವರ ಜಮಾಅತ್ ಮತ್ತು ಅವರ ಅನುಯಾಯಿಗಳಿಗೆ ಅಜ್ಞಾನಿಗಳೆನ್ನುವರು ಮತ್ತು ಅಸಹ್ಯದಿಂದ ಅವರ ಹೆಸರು ಹೇಳುವರು. ಅವರು ಹೇಳುತ್ತಾರೆ. "ಇಂತಹವರಿಂದ ಅಲ್ಲಾಹನು ಕಾಪಾಡಬೇಕು. ಇವರುಗಳು ಇಬ್ಲೀಸಿನ ವೇಷ ಧರಿಸಿ ಸ್ವೇಚ್ಛಾಚಾರದಿಂದ "ಹಮ್ಚು ಮನ್ ದೀಗರೇ ನೀಸ್ತ್" ನಮ್ಮ ಹಾಗೆ ಇತರರು, ಎಂಬಂತೆ ತಿರುಗಾಡುವರು ಮತ್ತು ಅಜ್ಞಾನತೆಯಿಂದ ಇತರರ ಮೇಲೆ ಆರೋಪಗಳನ್ನು ಹಚ್ಚುವರು. ನಾನು ಸತ್ಯವಾಗಿ ಹೇಳುವೆನು ಅಂತ್ಯ ತೀರ್ಮಾನದಂದು ಬಹುದೇವರಾಧನೆ ನಂತರ ಅಹಂಕರದ ಹೊರತು ಯಾವ ಆಪತ್ತು ಇಲ್ಲ. ಇದು ಎಂತಹ ಆಪತ್ತು ಆಗಿದೆ ಎಂದರೆ ಅದು ಉಭಯ ಲೋಕಗಳಲ್ಲಿಯೂ ಮನುಷ್ಯನನ್ನು ಅವಮಾನಿಸುತ್ತದೆ. ಪ್ರತಿಯೊಬ್ಬ ಏಕದೇವ ವಿಶ್ವಾಸಿಗನ ಮೇಲೆ ಅಲ್ಲಾಹನ ಕೃಪೆ ಇರುತ್ತದೆ. ಆದರೆ ಅಹಂಕಾರಿಗಳ ಮೇಲಲ್ಲ. ಶೈತಾನನು ಸಹ ಏಕತ್ವವಾದಿಯೆಂದು ಸಾರುತ್ತಿದ್ದ. ಆದರೆ ಅವನ ತಲೆಯಲ್ಲಿ ಅಹಂಕಾರವಿದ್ದ ಕಾರಣ, ಅಲ್ಲಾಹನ ದೃಷ್ಟಿಯಲ್ಲಿ ಪ್ರಿಯರಾದ ಆದಮರನ್ನು ಅವಮಾನದ ದೃಷ್ಟಿಯಿಂದ ಕಂಡನು. ಮತ್ತು ಆಕ್ಷೇಪ ಎತ್ತಿದರು. ಆದುದರಿಂದ ಅವನು ವಧಿಸಲ್ಪಟ್ಟನು ಮತ್ತು ಅವನ ಕೊರಳಲ್ಲಿ ಶಾಪದ ಸರಪಳಿ ಹಾಕಲಾಯಿತು. ಅಂದ ಹಾಗೆ ವಿನಾಶಕ್ಕೆ ಕಾರಣರಾಗುವಂತಹ ಮೊದಲ ಪಾಪ ಅಹಂಕಾರ ಎಂದಾಯಿತು." (ಅದೇ ಪುಟ 598).

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಹೇಳಿಕೆ ಭೂಟಾಟಿಕೆ ಹಾಗೂ ಸುಳ್ಳಿನಿಂದ ಮುಕ್ತವಾಗಿದೆ. ಮತ್ತು ಒಂದು ಆಳವಾದ ವಾಸ್ತವ ಹಾಗೂ ಸತ್ಯದಿಂದ ಕೂಡಿದ್ದಾಗಿದೆ.

ಅವರು ಹೇಳಿದರು. ಈ ಬಟಾಲ್ವಿ ಸಾಹೇಬರು ಅಹಂಕಾರಿಗಳ ಸರದಾರರು ಎಂಬುದು ಕೇವಲ ನನ್ನ ಅಭಿಮತವಲ್ಲ. ಬದಲು ಮುಸಲ್ಮಾನರಲ್ಲಿ ಹೆಚ್ಚಿನವರ ಅಭಿಪ್ರಾಯವಾಗಿದೆ. ಅಲ್ಲದೇ ಈ ಅಹಂಕಾರಕ್ಕೆ ಕಾರಣವಾದರೂ ಏನು ಎಂದು ಜನರು ಆಶ್ಚರ್ಯಪಡುತ್ತಾರೆ. ಉದಾಹರಣೆಗೆ ಶೈತಾನನು ಅಹಂಕಾರಿಯಾಗಲು ಕಾರಣ ಅವನು ತನ್ನ ಸೃಷ್ಟಿ ವಿಶೇಷ ರೀತಿಯಲ್ಲಾಗಿದೆ ಎಂದು ಭಾವಿಸುತ್ತಿದ್ದ. "ಖಲಖ್‌ತನಿ ಮಿನ್ ನಾರ್" ಎಂದು ಹೇಳಿಕೊಂಡು ಹಝುರತ್ ಸಫಿಯುಲ್ಲಾಹ್ ಅವರ ಮೇಲೆ "ಖಲ್‌ತಹು ಮಿನ್ ತೀನ್" ಎಂದು ಹೀಯಾಳಿಸುತ್ತಿದ್ದ. ಅಂದ ಹಾಗೆ ಹಝ್ರತ್ ಬಟಾಲ್ವಿ ಸಾಹೀಬರಿಗೆ ಇತರರ ಮೇಲೆ ಯಾವುದೇ ರೀತಿಯ ವಿಶೇಷತೆ ಇದ್ದರೆ ಅದರ ಸಾಕ್ಷ್ಯ ನೀಡಲಿ, ಒಂದಿಷ್ಟಾದರೂ ಸಾಕ್ಷ್ಯ ನೀಡಬೇಕು. ನಿಮಗೆ ಯಾವುದೇ ಮಹಾಪಂಡಿತನಿಂದ ಕಲಿತ ವಿದ್ಯೆ ಮೇಲೆ ಗರ್ವವಿದ್ದರೆ ಅದರ ಸಾಕ್ಷಿ ಒದಗಿಸಿ ಏಕೆಂದರೆ ಇಲ್ಲಿಯವರೆಗೂ ನಮಗೆ ತಿಳಿದಿಲ್ಲ. ನೀವು ವೈದ್ಯನೋ, ತತ್ವಜ್ಞಾನಿಯೋ, ವಿಜ್ಞಾನಿಯೋ, ವಾಗ್ಮಿಯೋ, ಸಾಹಿತಿಯೋ ಅಥವಾ ಖುರ್‌ಆನ್‌ನ ಜ್ಞಾನ ಸಾಕ್ಷ್ಯಗಳ ಮೇಲೆ ಪರಿಣತಿ ಹೊಂದಿದವರೋ ಅಥವಾ ಇಮಾಮ್ ಬುಖಾರಿಯ ರೀತಿ ಲಕ್ಷಾಂತರ ಹದೀಸುಗಳು ತುಟಿಯ ಮೇಲೆ ಇದೆಯೋ, ಇವುಗಳಲ್ಲಿ ಯಾವುದೂ ಇಲ್ಲದಿದ್ದರೆ ಶೈತಾನನ ಹಾಗೆ ಒಣ ಅಹಂಕಾರವಲ್ಲದೇ ಮತ್ತೇನು.

ಅವರು ಹೇಳಿದರು. "ಈಗ ನೆನಪಿರಲಿ. ಅಹಂಕಾರಕ್ಕೆ ಸುಳ್ಳಿನೊಂದಿಗೆ ನಂಟಿದೆ. ಅಲ್ಲದೇ ಅತ್ಯಂತ ಕೆಟ್ಟ ರೀತಿಯ ಸುಳ್ಳೆಂದರೆ ಅದರೊಂದಿಗೆ ಅಹಂಕಾರವು ಸೇರಿಕೊಂಡಿದೆ. ಆ ಕಾರಣದಿಂದಲೇ ಅಲ್ಲಾಹನು ಮೊಟ್ಟ ಮೊದಲಾಗಿ ಅಹಂಕಾರಿಯ ಶಿರವನ್ನು ತಗ್ಗಿಸುತ್ತಾನೆ, ಈಗ ಅದೇ ಆಗುವಂತಹದ್ದಿದೆ."

ಅವರು ಹೇಳಿದರು. "ನಾನು ಸತ್ಯವಾಗಿ ಹೇಳುತ್ತೇನೆ, ಮತ್ತು ನೋಡುತ್ತಿದ್ದೇನೆ. ಮಿಯಾ (ಓ) ಬಟೌಲ್ವಿ ಅವರ ಬೇರುಗಳೇ ಸುಳ್ಳಿನಿಂದ ಹರಡಿವೆ. ಅಹಂಕಾರ ಎಂಬ ಕಾಗುಣಿತವು ಆ ಸುಳ್ಳುಗಳನ್ನು ಇನ್ನಷ್ಟು ವಿಷಕಾರಕನನ್ನಾಗಿ ಮಾಡಿದೆ. ಏಕೆಂದರೆ ಶೈತಾನನ ಅಹಂಕಾರವು ತನ್ನೆಲ್ಲ ಭಾರ ಅವರ ಮೇಲೆ ಹಾಕಿದ್ದಾನೆ. ಆದ್ದರಿಂದಲೇ ಸುಳ್ಳಿನ ಕೆಡಕು ಪದಾರ್ಥ ಅವರ ಬಾಯಿಂದ ಜೋರಾಗಿ ಸುರಿಯುತ್ತದೆ." (ಅದೇ ಪುಟ 599).

ಅವರು ಹೇಳಿದರು. ನಾನು ಪ್ರಮಾಣ ಮಾಡಿ ಹೇಳಬಯಸುವೇನು. ನನ್ನ ಶಿಶ್ಯರು, ಮಿತ್ರರು ಆದ ಮೌಲ್ವಿ ಹಕೀಮ್ ನೂರುದ್ದೀನ್ ಸಾಹಿಬ್ **ಬಾರಕಲ್ಲಾಹು ತಆಲ ಫೀ ಮಜ್‌ದಿಹೀ ವಬಿಖಾಇಹೀ ವರಿಝ್‌ಖಿ ಇಬಾದಿಹಿ ಮಿನ್ ನಫಹಾತಿ ಫುಯೂಝಿಹೀ ವ ಬರಕಾತಿ ನೂರಿಹೀ ವಝಿಯಾಇಹೀ** ಒಂದೆಡೆ ನಿಂತು ಪವಿತ್ರ ಖುರ್‌ಆನ್‌ನ ತತ್ವಜ್ಞಾನಗಳನ್ನು ವಿವರಿಸಲಿ. ಇನ್ನೊಂದೆಡೆ ಬಟಾಲ್ವಿ ಖುರ್‌ಆನ್ ವ್ಯಾಖ್ಯಾನ ವಿವರಿಸಬಯಸಿದರೆ ಆಗ ನನ್ನ ದೃಢ ವಿಶ್ವಾಸವೇನೆಂದರೆ. ಅವರ ಎದುರು ಈ ಅರ್ಧಪಂಡಿತ ಬಟೌಲ್ವಿ ಹೈರಾಣಾಗಿ ವಿವಶಗೊಂಡು ಸೋಲುನ್ನುವನು. ಆಗ ಎಲ್ಲ ವಿವೇಕವಂತರು ಅವರ ಮೇಲೆ ನಗುವರು. ಯಾವಾಗಲೂ ನನಗೆ ಅವರ ಮೇಲೆ ಆಶ್ಚರ್ಯವಾಗುತ್ತದೆ. ಈ ಹಾಸ್‌ಬುಲ್ಲೈಲ್ (ಹಗಲು ಇರುಳ ಭೇದ ತಿಳಿಯದವನು) ಆಗಿಯೂ ಏಕೆ ಅನಾವಶ್ಯಕವಾಗಿ ಅಹಂಕಾರ ಮತ್ತು ಅಪ್ಪಟ ಸುಳ್ಳುಗಳನ್ನು ಆತ್ಮಾವಲೋಕನ ಮಾಡಿ ನೋಡಿಕೊಳ್ಳುವುದಿಲ್ಲ ಮತ್ತು ತನ್ನ ನೀಚ ಬುದ್ಧಿಯಿಂದ ಅರ್ಹ ಉಲಮಾ ಮತ್ತು ಸಜ್ಜನರನ್ನು ಕೀಳಾಗಿ ಕಾಣುತ್ತಾನೆ." (ಅದೇ ಪುಟ 600)

ಭವಿಷ್ಯವಾಣಿಗಳು ಸುಳ್ಳಾದವು ಎಂಬ ಆಪಾದನೆಗಳ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

"ಇದರ ನಿರ್ಣಯವಂತೂ ತುಂಬ ಸುಲಭವಾಗಿದೆ. ಆಪಾದನೆ ಮಾಡುವವನ ಕರ್ತವ್ಯವಾಗಿದೆ. ಒಂದು ಸಭೆ ಏರ್ಪಡಿಸಿ ಯಾವ ಭವಿಷ್ಯವಾಣಿ ಸುಳ್ಳಾಗಿದೆ. ಅದರ ಬಗ್ಗೆ ಎತ್ತಿ ತೋರಿಸಬೇಕೇ ಹೊರತು ಬರೀ ತನ್ನ ಊಹೆ ಆಗಿರಬಾರದು. ಅಲ್ಲಾಹನ ಅನುಗ್ರಹದಿಂದ ಇವತ್ತಿಗೂ ಯಾವ ಭವಿಷ್ಯವಾಣಿಯೂ ಸುಳ್ಳಾಗಲಿಲ್ಲ. ಬದಲು ಸುಮಾರು ಮೂರು ಸಾವಿರ ಭವಿಷ್ಯವಾಣಿಗಳು ಇಲ್ಲಿಯತನಕ ಪೂರ್ಣಗೊಂಡಿವೆ ಮತ್ತು ಪೂರ್ಣಗೊಳ್ಳುತ್ತಿವೆ. (ಅದೇ ಪುಟ 600)

ಸುಳ್ಳು ಹೇಳುವ ಮತ್ತು ಧರ್ಮಸಮ್ಮತವಲ್ಲದ ಸಂಪತ್ತು ಸಂಪಾದಿಸುವವನು ಎಂಬ ಆಪಾದನೆಯ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. "ನಿಮ್ಮಂತಹ ನಿಷ್ಪ್ರಯೋಜಕ ಸುಳ್ಳುಗಾರರು, ಪ್ರವಾದಿಗಳ ಮೇಲೆ ಇಂತಹುದೇ ಆಪಾದನೆಗಳು ಮಾಡಿರುತ್ತಾರೆ. ಹಝ್ರತ್ ಇಬ್ರಾಹಿಮ್(ಅ) ರವರ ಮೇಲೆ ಸುಳ್ಳಿನ ಆಪಾದನೆ, ಹಝ್ರತ್ ಮೂಸಾ ಮತ್ತು ಹ. ಈಸಾ(ಅ) ಅವರ ಮೇಲೆಯೂ ಹರಾಮ್ ಸಂಪತ್ತು ಸಂಪಾದನೆಯ ಆಪಾದನೆ, ಆ ಕಾಲದ ಅಧರ್ಮಿ ಕ್ರೈಸ್ತ ಹಾಗೂ ಇನ್ನಿತರರು ಇಂತಹುದೇ

***(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)***

# ಖುತ್‌ಬ ಜುಮುಅ

**ಮನುಷ್ಯನು ನೋಡಿದ ಅತ್ಯಂತ ಸುಂದರವಾದ ಜೋಡಿ ಹಝ್ರ್‌ರತ್ ರುಖಿಯ(ರ) ಮತ್ತು ಅವರ ಪತಿಯಾದ ಹಝ್ರ್‌ರತ್ ಉಸ್ಮಾನ್(ರ) ಆಗಿರುವರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹಝ್ರ್‌ರತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರ್‌ರತ್ ಉಸ್ಮಾನ್(ರ)ರವರು ಹಝ್ರ್‌ರತ್ ಪೈಗಂಬರರಿಗಿಂತ(ಸ) ಸುಮಾರು ಐದು ವರ್ಷ ಚಿಕ್ಕವರಾಗಿದ್ದರು. ಮತ್ತು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಆರಂಭದ ಕೆಲವು ಜನರಲ್ಲಿ ಒಳಪಟ್ಟಿದ್ದರು.**

**ಹಝ್ರ್‌ರತ್ ಪೈಗಂಬರ್(ಸ)ರವರು ಹಝ್ರ್‌ರತ್ ರುಖೈಯ ಅವರೊಂದಿಗೆ ಹೇಳಿದರು: ಮಗಳೇ, ಅಬೂ ಅಬ್ದುಲ್ಲಾಹ್ ಎಂದರೆ ಹಝ್ರ್‌ರತ್ ಉಸ್ಮಾನ್‌ರೊಂದಿಗೆ(ರ) ಉತ್ತಮವಾದ ರೀತಿಯಲ್ಲಿ ವರ್ತಿಸು. ಏಕೆಂದರೆ ಇವರು ನನ್ನ ಸಹಾಬಿಯರಲ್ಲಿ ಸ್ವಭಾವದ ದೃಷ್ಟಿಯಲ್ಲಿ ನನಗೆ ಅತ್ಯಂತ ಸಾಮ್ಯತೆಯುಳ್ಳವರಾಗಿರುವರು.**

**ಹನ್ನೊಂದು ದಿವಂಗತರಾದ ಸನ್ಮಾನ್ಯ ಮೌಲಾನ ಸುಲ್ತಾನ್ ಮಹ್ಮೂದ್ ಅನ್ವರ್ ಸಾಹಿಬ್ ಮಾಜಿ ನಾಝ್ಹಿರ್ ಇಸ್ಲಾಹೋ ಇರ್ಶಾದ್ ಮರ್ಕಝ್ಹಿಯಾ, ನಾಝ್ಹಿರ್ ಖಿದ್‌ಮತೇ ದರ್ವೇಶಾನ್ ಮತ್ತು ನಾಝ್ಹಿರ್ ಇಸ್ಲಾಹೋಇರ್ಶಾದ್ ರಿಶ್ತ ನಾತ, ಮೌಲಾನ ಮುಹಮ್ಮದ್ ಉಮರ್ ಸಾಹಿಬ್ ಖಾದಿಯಾನಿನ ಮಾಜಿ ನಾಝ್ಹಿರ್ ಇಸ್ಲಾಹೋ ಇರ್ಶಾದ್ ಮರ್ಕಝ್ಹಿಯಾ, ಫ್ಯಾಕ್ಟರಿ ಏರಿಯಾ ರಬ್ವದ ಮುಹಮ್ಮದ್ ಇಸ್ಮಾಈಲ್ ಸಾಹಿಬ್‌ರ ಮಗನಾದ ಸನ್ಮಾನ್ಯ ಮುರಬ್ಬೀ ಹಬೀಬ್ ಅಹ್ಮದ್ ಸಾಹಿಬ್, ಸನ್ಮಾನ್ಯ ಬದ್ರುಝ್ಝಮಾನ್ ಸಾಹಿಬ್ ಯು.ಕೆ.ಯ ವಕಾಲತ್ ಮಾಲ್ ಆಫಿಸಿನ ಉದ್ಯೋಗಿ, ಜಮಾಅತಿನ ಮುರಬ್ಬಿಯಾದ ಮೌಲವಿ ಮುಹಮ್ಮದ್ ಅಹ್ಮದ್ ನಈಂ ಸಾಹಿಬ್‌ರ ಮಗನಾದ ಸನ್ಮಾನ್ಯ ಮನ್ಸೂರ್ ಅಹ್ಮದ್ ತಹ್ಸೀನ್ ಸಾಹಿಬ್, ತನ್ಸಾನಿಯದ ಡಾಕ್ಟರ್ ಐದಿ ಇಬ್ರಾಹೀಂ ಮವಾಂಗ ಸಾಹಿಬ್, ಖಾದಿಯಾನಿನ ದರ್ವೇಶಾದ ದೀನ್ ಮುಹಮ್ಮದ್ ಸಾಹಿಬ್ ನಂಗ್ಲಿಯ ಪತ್ನಿಯಾದ ಸನ್ಮಾನ್ಯ ಸುಗ್ರ ಬೇಗಂ ಸಾಹಿಬ, ಸನ್ಮಾನ್ಯ ಚೌಧರಿ ಕರಾಮತುಲ್ಲಾಹ್ ಸಾಹಿಬ್, ಜರ್ಮನಿಯ ಚೌಧರಿ ಮುನವ್ವರ್ ಅಹ್ಮದ್ ಖಾಲಿದ್ ಸಾಹಿಬ್, ಬಾಂಗ್ಲಾದೇಶದ ನಿವೃತ್ತ ಮುಬಲ್ಲಿಗ್‌ರಾದ ಅಹ್ಮದ್ ಸಾದಿಖ್ ತಾಹಿರ್ ಮಹ್ಮೂದ್‌ರ ಪತ್ನಿಯಾದ ನಸೀರ ಬೇಗಮ್, ರಫೀಉದ್ದೀನ್ ಬಟ್ ಸಾಹಿಬ್ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ**

**ಅಲ್‌ಜೀರಿಯಾ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವ ವಿಶೇಷ ಕೋರಿಕೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22-01-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಇಂದು ನಾನು ಹಝ್ರ್‌ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ಶುರುಮಾಡುತ್ತೇನೆ. ಇದು ಕೆಲವು ವಾರಗಳ ತನಕ ಜಾರಿಯಲ್ಲಿರುವುದು.

ಹಝ್ರ್‌ರತ್ ಉಸ್ಮಾನ್‌ರ(ರ) ಬಗ್ಗೆ ನೆನಪಿಡಬೇಕಾದ ಮೊದಲ ಸಂಗತಿಯೇನೆಂದರೆ, ಇವರು ಸ್ವತಃ ಬದ್ರ್ ಯುದ್ಧದಲ್ಲಿ ಭಾಗವಹಿಸಿರಲಿಲ್ಲ. ಆದರೆ ಬದ್ರ್ ಯುದ್ಧದ ಯುದ್ಧ ಸಂಪತ್ತಿನಿಂದ ಒಂದು ಭಾಗವನ್ನು ಕೊಟ್ಟು ಹಝ್ರ್‌ರತ್ ಪೈಗಂಬರ್(ಸ) ಯುದ್ಧದಲ್ಲಿ ಭಾಗಿಯನ್ನಾಗಿ ಗಣಿಸಿದ್ದ ಎಂಟು ಸೌಭಾಗ್ಯಶಾಲಿಯರಲ್ಲಿ ಅವರು ಸೇರಿದ್ದರು.

ಅವರ ಕುಟುಂಬ ಪರಂಪರೆ ಹೀಗಿದೆ: ಉಸ್ಮಾನ್ ಬಿನ್ ಅಫ್ಫಾನ್ ಬಿನ್ ಅಬುಲ್‌ಆಸ್ ಬಿನ್ ಉಮಯ್ಯ ಬಿನ್ ಅಬ್ದುಶ್ಶಮ್ಸ್ ಬಿನ್ ಅಬ್ದು ಮನಾಫ್ ಬಿನ್ ಕಸ್ಸಿ ಬಿನ್ ಕಲಾಬ್. ಹೀಗೆ ಇವರ ಕುಟುಂಬ ಪರಂಪರೆ ಹಝ್ರ್‌ರತ್ ಪೈಗಂಬರರ(ಸ) ಕುಟುಂಬ ಪರಂಪರೆಯೊಂದಿಗೆ ಐದನೇ ತಲಮಾರಿನಲ್ಲಿ ಅಬ್ದು ಮನಾಫ್‌ರೊಂದಿಗೆ ಸೇರುತ್ತದೆ. ಹಝ್ರ್‌ರತ್ ಉಸ್ಮಾನ್‌ರ(ರ) ತಾಯಿ ಅರ್‌ವ ಬಿನ್ತ್ ಕುರೈಝ್ ಆಗಿದ್ದರು. ಹಝ್ರ್‌ರತ್ ಉಸ್ಮಾನ್‌ರ(ರ) ಅಜ್ಜಿ ಉಮ್ಮೇ ಹಕೀಂ ಬೈಝಾ ಬಿನ್ತ್ ಅಬ್ದುಲ್ ಮುತಲ್ಲಿಬ್ ಆಗಿದ್ದರು. ಅವರು ಹಝ್ರ್‌ರತ್ ಪೈಗಂಬರರ(ಸ) ತಂದೆಯ ಸ್ವಂತ ಸಹೋದರಿಯಾಗಿದ್ದರು. ಒಂದು ವರದಿಯ ಪ್ರಕಾರ ಹಝ್ರ್‌ರತ್ ಪೈಗಂಬರರ(ಸ) ತಂದೆಯಾದ ಅಬ್ದುಲ್ಲಾಹ್ ಮತ್ತು ಹಝ್ರ್‌ರತ್ ಉಸ್ಮಾನ್‌ರ ಅಜ್ಜಿಯಾದ ಉಮ್ಮೇ ಹಕೀಂ ಬೈಝಾ ಬಿನ್ತ್ ಅಬ್ದುಲ್‌ಮುತಲ್ಲಿಬ್ ಅವಳಿಜವಳಿಯಾಗಿ ಹುಟ್ಟಿದ್ದರು ಎಂದು ಬಂದಿದೆ. ಹಝ್ರ್‌ರತ್ ಉಸ್ಮಾನ್‌ರ(ರ) ತಾಯಿ ಅರ್‌ವ ಬಿನ್ತ್ ಕುರೈಝ್ ಹುದೈಬಿಯಾ ಸಂಧಿಯ ನಂತರ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರು ಮತ್ತು ಹಿಜ್ರತ್ ಮಾಡಿ ಮದೀನಕ್ಕೆ ಹೋಗಿದ್ದರು. ತನ್ನ ಮಗನಾದ ಹಝ್ರ್‌ರತ್ ಉಸ್ಮಾನ್(ರ) ನಿಧನರಾಗುವ ತನಕ ಮದೀನದಲ್ಲೇ ಇದ್ದರು. ಹಝ್ರ್‌ರತ್ ಉಸ್ಮಾನ್‌ರ(ರ) ತಂದೆ ಜಾಹಿಲಿಯ್ಯತ್ತಿನ ಕಾಲದಲ್ಲೇ ಮೃತಪಟ್ಟಿದ್ದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಇಮಾಮ್ ಹಜರ್ ಅಸ್ಕಲಾನಿ, ಭಾಗ-4, ಪುಟ-377, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005) (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್, ಪುಟ-15, ಅಲ್‌ಫಸ್ಲ್ ಅವ್ವಲ್, ದಾರುಲ್ ಮಾರಿಫ ಬೈರೂತ್ 2006) (ಸೈರುಸ್ಸಹಾಬ, ಸಂಪುಟ-1, ಪುಟ-154, ದಾರುಲ್ ಇಶಾಅತ್ ಕರಾಚಿ 2004) (ಅತ್ತಬಖಾತುಲ್ ಕುಬ್ರ, ಸಂಪುಟ-8, ಪುಟ-182-183)

ಹಝ್ರ್‌ರತ್ ಉಸ್ಮಾನ್‌ರ(ರ) ಉಪನಾಮದ ಬಗ್ಗೆ ಹೀಗೆ ಹೇಳಲಾಗುತ್ತದೆ. ಜಾಹಿಲಿಯ್ಯತ್ತಿನ ಕಾಲದಲ್ಲಿ ಹಝ್ರ್‌ರತ್ ಉಸ್ಮಾನ್‌ರ(ರ) ಉಪನಾಮ ಅಬೂ ಅಮ್ರ್ ಎಂದಾಗಿತ್ತು. ಹಝ್ರ್‌ರತ್ ರುಖಿಯ ಬಿನ್ತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಂದ ಅವರ ಮಗನಾದ ಅಬ್ದುಲ್ಲಾಹ್ ಹುಟ್ಟಿದ್ದಾಗ ಅದರ ಆಧಾರದಲ್ಲಿ ಮುಸ್ಲಿಮರ ನಡುವೆ ಅವರು ಅಬುಅಬ್ದುಲ್ಲಾಹ್ ಎಂಬ ಉಪನಾಮದೊಂದಿಗೆ ಪ್ರಸಿದ್ಧರಾದರು. (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್ ಶಖ್ಸಿಯ ವ ಅಸ್ರಹು, ಲೇಖಕ ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ-15, ಅಲ್‌ಫಸ್ಲ್ ಅವ್ವಲ್, ದಾರುಲ್ ಮಾರಿಫ ಬೈರೂತ್ 2006)

ಇಬ್ನು ಇಸ್‌ಹಾಖ್‌ರ ಪ್ರಕಾರ ಹಝ್ರ್‌ರತ್ ಪೈಗಂಬರ್(ಸ) ತನ್ನ ಮಗಳಾದ ರುಖಿಯರ(ರ) ವಿವಾಹ ಹಝ್ರ್‌ರತ್ ಉಸ್ಮಾನ್‌ರೊಂದಿಗೆ(ರ) ನಡೆಸಿದ್ದರು. ಅವರು ಬದ್ರ್ ಯುದ್ಧದ ದಿನಗಳಲ್ಲಿ ಮೃತಪಟ್ಟರು. ಆಗ ಹಝ್ರ್‌ರತ್ ಪೈಗಂಬರ್(ಸ) ತನ್ನ ಎರಡನೇ ಮಗಳಾದ ಹಝ್ರ್‌ರತ್ ಉಮ್ಮೇ ಕುಲ್ಸುಮಿನ(ರ) ವಿವಾಹ ಹಝ್ರ್‌ರತ್ ಉಸ್ಮಾನ್‌ರೊಂದಿಗೆ(ರ) ನಡೆಸಿದ್ದರು. ಇದೇ ಕಾರಣದಿಂದ

ಹಝ್ರತ್ ಉಸ್ಮಾನ್‌ರನ್ನು(ರ) **ಧುನ್ನೂರೈನ್** ಎಂದು ಕರೆಯಲಾಗುತ್ತಿತ್ತು. ಎಂದರೆ ಎರಡು ಪ್ರಕಾಶಗಳುಳ್ಳವರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಇಮಾಮ್ ಹಜರ್ ಅಸ್ಕಲಾನ. ಭಾಗ-4, ಪುಟ-377, ಉಸ್ಮಾನ್ ಬಿನ್ ಅಫ್ಫಾನ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹೀಗೆಯೂ ವರದಿಯಾಗಿದೆ: ಹಝ್ರತ್ ಉಸ್ಮಾನ್(ರ) ಪ್ರತಿದಿನ ರಾತ್ರಿ ತಹಜ್ಜುದ್ ನಮಾಝಿನಲ್ಲಿ ಬಹಳ ಹೆಚ್ಚಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಪವಿತ್ರ ಖುರ್‌ಆನ್ ಮತ್ತು ತಹಜ್ಜುದ್ ನಮಾಝ್ ಎರಡೂ ಪ್ರಕಾಶಗಳಾಗಿರುವ ಕಾರಣದಿಂದ ಅವರು ಧುನ್ನೂರೈನ್ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್ ಶಖ್ಸಿಯ ವ ಅಸ್ರಹು, ಲೇಖಕ ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ-16, ಅಲ್‌ಫಸ್ಲ್ ಅವ್ವಲ್, ದಾರುಲ್ ಮಾರಿಫ ಬೈರೂತ್ 2006)

ಹಝ್ರತ್ ಉಸ್ಮಾನ್‌ರ(ರ) ಜನನದ ಬಗ್ಗೆ ಲಭಿಸುವ ಸರಿಯಾದ ವರದಿ ಪ್ರಕಾರ ಹಝ್ರತ್ ಉಸ್ಮಾನ್(ರ) **ಅಸ್‌ಹಾಬುಲ್ ಫೀಲಿನ** ಘಟನೆಯ ಆರು ವರ್ಷಗಳ ನಂತರ ಮಕ್ಕದಲ್ಲಿ ಹುಟ್ಟಿದ್ದರು. ಅವರು ತಾಇಫ್‌ನಲ್ಲಿ ಹುಟ್ಟಿದ್ದರು ಎಂದೂ ಹೇಳಲಾಗುತ್ತದೆ. ಅವರು ಹಝ್ರತ್ ಪೈಗಂಬರರಿಗಿಂತ(ಸ) ಸುಮಾರು ಐದು ವರ್ಷ ಚಿಕ್ಕವರಾಗಿದ್ದರು. (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್ ಶಖ್ಸಿಯ ವ ಅಸ್ರಹು, ಲೇಖಕ ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ-16, ಅಲ್‌ಫಸ್ಲ್ ಅವ್ವಲ್, ದಾರುಲ್ ಮಾರಿಫ ಬೈರೂತ್ 2006)

ಅವರ ಇಸ್ಲಾಂ ಧರ್ಮ ಸ್ವೀಕಾರದ ಬಗ್ಗೆ ಯಝೀದ್ ಬಿನ್ ರೂಮಾನ್‌ರಿಂದ ಹೀಗೆ ವರದಿಯಾಗಿದೆ: ಒಂದು ಬಾರಿ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಮತ್ತು ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಇಬ್ಬರೂ ಹಝ್ರತ್ ಝುಬೇರ್ ಬಿನ್ ಅವಾಮ್‌ರ(ರ) ಹಿಂದೆ ನಡೆಯುತ್ತಾ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ಅವರಿಬ್ಬರ ಮುಂದೆ ಇಸ್ಲಾಮಿನ ಸಂದೇಶವನ್ನು ಇರಿಸಿದರು. ಅವರಿಗೆ ಪವಿತ್ರ ಖುರ್‌ಆನ್ ಓದಿ ಹೇಳಿದರು ಮತ್ತು ಅವರಿಗೆ ಇಸ್ಲಾಮಿನ ಹಕ್ಕುಗಳ ಬಗ್ಗೆ ಹೇಳಿಕೊಟ್ಟರು. ಅಲ್ಲಾಹನಿಂದ ಲಭಿಸುವ ಗೌರವಾದರಗಳ ಕುರಿತು ಅವರಿಗೆ ವಾಗ್ದಾನ ನೀಡಿದರು. ಹೀಗೆ ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ತಲ್‌ಹ(ರ) ಇಬ್ಬರೂ ಸತ್ಯವಿಶ್ವಾಸ ಸ್ವೀಕರಿಸಿದರು ಮತ್ತು ಹಝ್ರತ್ ಪೈಗಂಬರರನ್ನು(ಸ) ಸತ್ಯಪಡಿಸಿದರು. ಅನಂತರ ಹಝ್ರತ್ ಉಸ್ಮಾನ್(ರ) ಹೇಳಿದರು: ಯಾ ರಸೂಲಲ್ಲಾಹ್, ನಾನೀಗಷ್ಟೆ ಸಿರಿಯದಿಂದ ಮರಳಿ ಬಂದಿರುವೆನು. ನಾವು ಮಅ್‌ನ್ ಮತ್ತು ಝರ್‌ಖಾ ಎಂಬ ಸ್ಥಳದ ನಡುವೆ ತಂಗಿದ ನಂತರ ಅಲ್ಲಿ ನಿದ್ದೆ ಮಾಡುತ್ತಿದ್ದಾಗ, ಘೋಷಣೆ ಮಾಡುವ ಒಬ್ಬ ವ್ಯಕ್ತಿ ಹೀಗೆ ಘೋಷಿಸುತ್ತಿದ್ದನು: ಹೇ ನಿದ್ದೆ ಹೋದವರೇ, ಎದ್ದೇಳಿರಿ, ನಿಶ್ಚಯವಾಗಿಯೂ ಅಹ್ಮದ್ ಮಕ್ಕದಲ್ಲಿ ಆಗಮಿಸಿದ್ದಾರೆ. ಅನಂತರ ನಾವು ಮರಳಿಬಂದಾಗ ನಾವು ನಿಮ್ಮ ಬಗ್ಗೆ ಕೇಳಿದೆವು. ಮಅ್‌ನ್ ಎಂಬುದು ಅರ್ದನಿನ ದಕ್ಷಿಣ ದಿಕ್ಕಿನಲ್ಲಿ ಹಿಜಾಝಿನ ಗಡಿ ಪ್ರದೇಶದ ಸಮೀಪವಿರುವ ಪಟ್ಟಣವಾಗಿದೆ. ಝರ್‌ಖ ಮಅ್‌ನ್ ಪಟ್ಟಣದ ಸಮೀಪವೇ ಇರುವ ಸ್ಥಳವಾಗಿದೆ. ಹಝ್ರತ್ ಪೈಗಂಬರ್(ಸ) ದಾರುಲ್ ಅರ್ಖಮ್‌ನಲ್ಲಿ ಪ್ರವೇಶಿಸುವುದಕ್ಕೆ ಮುಂಚೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಆರಂಭದ ಕೆಲವು ಜನರಲ್ಲಿ ಹಝ್ರತ್ ಉಸ್ಮಾನ್(ರ) ಒಳಪಟ್ಟಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-31, ದಾರ್ ಅಹಯಾಉತ್ತುರಾಸುಲ್ ಅರಬಿ ಬೈರೂತ್ 1996) (ಮುಜಮುಲ್ ಬಲದಾನ್, ಗುಲಾಮ್ ಜೀಲಾನಿ ಬರ್ಕ್, ಪುಟ-320, ಮುಜಮುಕ್ ಬಲದಾನ್, ಸಂಪುಟ-3, ಪುಟ-472, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಇಸ್ಲಾಂ ಧರ್ಮ ಸ್ವೀಕರಿಸಿದ ನಂತರ ಅವರ ಮೇಲೆ ದೌರ್ಜನ್ಯಗಳು ಸಹ ನಡೆಯಿತ್ತು. ಮೂಸಾ ಬಿನ್ ಮುಹಮ್ಮದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಇಸ್ಲಾಂ ಸ್ವೀಕರಿಸಿದಾಗ ಅವರನ್ನು ಅವರ ಚಿಕ್ಕಪ್ಪರಾದ ಹಕಂ ಬಿನ್ ಅಬುಲ್‌ಆಸ್ ಬಿನ್ ಉಮಯ್ಯ ಹಿಡಿದುಕೊಂಡು ಹಗ್ಗದಿಂದ ಕಟ್ಟಿದರು ಮತ್ತು ಹೀಗೆ ಹೇಳಿದರು: ನೀನು ನಿನ್ನ ತಂದೆತಾತಂದಿರ ಧರ್ಮವನ್ನು ಬಿಟ್ಟುಕೊಂಡು ಹೊಸ ಧರ್ಮವನ್ನು ಸ್ವೀಕರಿಸಿದ್ದೀಯ? ದೇವನಾಣೆ, ನೀನು ನಿನ್ನ ಈ ಹೊಸ ಧರ್ಮವನ್ನು ಉಪೇಕ್ಷಿಸುವ ವರೆಗೆ ನಾನು ನಿನಗೆ ಕಟ್ಟಿದ ಹಗ್ಗವನ್ನು ಖಂಡಿತವಾಗಿಯೂ ಬಿಡಿಸುವುದಿಲ್ಲ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನಾಣೆ, ನಾನು ಅದನ್ನು ಖಂಡಿತ ಉಪೇಕ್ಷಿಸುವುದಿಲ್ಲ ಮತ್ತು ಅದರಿಂದ ಎಂದಿಗೂ ಬಿಟ್ಟುನಿಲ್ಲುವುದಿಲ್ಲ. ಅವರಿಗೆ ಧರ್ಮದಲ್ಲಿದ್ದ ದೃಢಚಿತ್ತತೆಯ ಈ ಸ್ಥಿತಿಯನ್ನು ಕಂಡಾಗ ಹಕಂ ಯಾವುದೇ ನಿರ್ವಾಹವಿಲ್ಲದೇ ಅವರನ್ನು ಬಿಟ್ಟುಬಿಟ್ಟರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-31, ಉಸ್ಮಾನ್ ಬಿನ್ ಅಫ್ಫಾನ್, ದಾರ್ ಅಹಯಾಉತ್ತುರಾಸುಲ್ ಅರಬಿ ಬೈರೂತ್ 1996)

ಹಝ್ರತ್ ರುಖಿಯರೊಂದಿಗೆ ಹಝ್ರತ್ ಉಸ್ಮಾನ್‌ರ(ರ) ವಿವಾಹದ ಘಟನೆ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರರ(ಸ) ನುಬುವ್ವತ್ ವಾದಕ್ಕೆ ಮುಂಚಿತವಾಗಿ ಹಝ್ರತ್ ರುಖಿಯರ(ರ) ವಿವಾಹ ಸಂಬಂಧ ಅಬೂಲಹಬಿನ ಮಗನಾದ ಉತ್‌ಬರೊಂದಿಗೆ ಮತ್ತು ರುಖಿಯರ ಸಹೋದರಿ ಹಝ್ರತ್ ಉಮ್ಮು ಕುಲ್ಸುಮ್‌ರ(ರ) ಸಂಬಂಧ ಉತ್‌ಬರ ಸಹೋದರ ಉತೈಬರೊಂದಿಗೆ ಆಗಿತ್ತು. ಸೂರತುಲ್ಲಹಬ್ ಅವತೀರ್ಣವಾದಾಗ, ಉತ್ಬ ಮತ್ತು ಉತೈಬರ ತಂದೆ ಅಬೂಲಹಬ್ ಅವರೊಂದಿಗೆ ಹೀಗೆ ಹೇಳಿದರು: ನೀವಿಬ್ಬರೂ ಮುಹಮ್ಮದ್‌ರ(ಸ) ಪುತ್ರಿಯರಿಂದ ಬೇರ್ಪಡದಿದ್ದರೆ, ನನಗೆ ನಿಮ್ಮೊಂದಿಗೆ ಯಾವುದೇ ಸಂಬಂಧವಿರಲಾರದು. ಈ ಸಂಬಂಧವನ್ನು ಮುರಿಯಿರಿ. ಹೀಗೆ ಅವರಿಬ್ಬರೂ ವಿವಾಹ ನಡೆಯುವುದಕ್ಕೆ ಮುಂಚಿತವಾಗಿಯೇ ಇಬ್ಬರೂ ಸಹೋದರಿಯರಿಗೆ ತಲಾಖ್ ನೀಡಿದರು. ಅನಂತರ ಹಝ್ರತ್ ಪೈಗಂಬರರ(ಸ) ಮಗಳಾದ ರುಖಿಯರ(ರ) ವಿವಾಹ ಹಝ್ರತ್ ಉಸ್ಮಾನ್‌ರೊಂದಿಗೆ(ರ) ಮಕ್ಕದಲ್ಲೇ ನಡೆದಿತ್ತು. ಹಝ್ರತ್ ಉಸ್ಮಾನ್(ರ) ಅವರೊಂದಿಗೆ ಅಬಿಸೀನಿಯಾದ ಕಡೆಗೆ ವಲಸೆ ಹೋದರು. ಹಝ್ರತ್ ರುಖಿಯ(ರ) ಮತ್ತು ಹಝ್ರತ್ ಉಸ್ಮಾನ್(ರ) ಇಬ್ಬರೂ ಅತುಲ್ಯವಾದ ಸೌಂದರ್ಯವನ್ನು ಹೊಂದಿದ್ದರು. ಅವರ ಬಗ್ಗೆ ಹೀಗೆ ಹೇಳಲಾಗುತ್ತದೆ: **ಅಹ್‌ಸನ ಝೌಜೈನಿ ರಆಹುಮಾ ಇನ್ಸಾನುನ್ ರುಖಿಯ್ಯತು ವ ಝೌಜುಹಾ ಉಸ್ಮಾನ್**. ಎಂದರೆ ಮನುಷ್ಯನು ನೋಡಿದ ಅತ್ಯಂತ ಸುಂದರವಾದ ಜೋಡಿ ಹಝ್ರತ್ ರುಖಿಯ(ರ) ಮತ್ತು ಅವರ ಪತಿಯಾದ ಹಝ್ರತ್ ಉಸ್ಮಾನ್(ರ) ಆಗಿರುವರು. (ಶರಹ್ ಅಲ್ಲಾಮ ಝುರ್‌ಖಾನಿ, ಭಾಗ-4, ಪುಟ-322-323, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಅಬ್ದುರ್ರಹ್ಮಾನ್ ಬಿನ್ ಉಸ್ಮಾನ್ ಖುರ್‌ಶಿ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ತನ್ನ ಮಗಳ ಮನೆಗೆ ಹೋದರು. ಆ ವೇಳೆ ಅವರು ಹಝ್ರತ್ ಉಸ್ಮಾನ್‌ರ(ರ) ತಲೆಯನ್ನು ತೊಳೆಯುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಮಗಳೇ, ಅಬೂ ಅಬ್ದುಲ್ಲಾಹ್ ಎಂದರೆ ಹಝ್ರತ್ ಉಸ್ಮಾನ್‌ರೊಂದಿಗೆ(ರ) ಉತ್ತಮವಾದ ರೀತಿಯಲ್ಲಿ ವರ್ತಿಸು. ಏಕೆಂದರೆ ಇವರು ನನ್ನ ಸಹಾಬಿಯರಲ್ಲಿ ಸ್ವಭಾವದ ದೃಷ್ಟಿಯಲ್ಲಿ ನನಗೆ ಅತ್ಯಂತ ಸಾಮ್ಯತೆಯುಳ್ಳವರಾಗಿರುವರು. (ಮುಜಮುಲ್ ಕಬೀರ್ ಲಿತ್ತಿಬ್ರಾನಿ, ಭಾಗ-1, ಪುಟ-76, ಹದೀಸ್-98, ದಾರ್ ಅಹಯಾಉತ್ತುರಾಸುಲ್ ಅರಬಿ 2002)

ಇಬ್ನು ಇಸ್‌ಹಾಖ್ ಹೇಳುತ್ತಾರೆ: ಸಹಾಬಿಯರ ಮೇಲೆ ಆಗುತ್ತಿದ್ದ ಪರೀಕ್ಷಣೆಯನ್ನು ಹಝ್ರತ್ ಪೈಗಂಬರ್(ಸ) ನೋಡುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗೆ ಅಲ್ಲಾಹನ ಬಳಿ ಇದ್ದ ಸ್ಥಾನದ ಕಾರಣ ಮತ್ತು ಅವರ ಚಿಕ್ಕಪ್ಪರಾದ ಅಬೂತಾಲಿಬ್‌ರ ಕಾರಣದಿಂದ ಹಝ್ರತ್ ಪೈಗಂಬರ್(ಸ) ಸ್ವಲ್ಪ ಮಟ್ಟಿಗೆ ಸುರಕ್ಷಿತರಾಗಿದ್ದರು. ಆದರೆ ಸಹಾಬಿಯರು ಅನುಭವಿಸುತ್ತಿದ್ದ ಕಷ್ಟತೆಗಳನ್ನು ತಡೆಯಲು ಅವರಿಗೆ ಶಕ್ತಿಯಿದ್ದಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೇಳಿದರು: ಕಷ್ಟತೆಗಳಿಂದ ಮುಕ್ತಿ ಲಭಿಸುವ ತನಕ ನೀವು ಅಬಿಸೀನಿಯಕ್ಕೆ ಹೋಗಿ ನೆಲೆಸಿರಿ. ಅಲ್ಲಿ ಯಾರ ಮೇಲೂ ದೌರ್ಜನ್ಯ ಮಾಡದ ಒಬ್ಬ ಅರಸ ಇದ್ದಾನೆ. ಅದು ಸತ್ಯದ ಪ್ರದೇಶವಾಗಿದೆ. ಹೀಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬಿಯರು ಫಿತ್ನದಿಂದ ಮುಕ್ತಿ ಪಡೆಯಲು ಮತ್ತು ಧರ್ಮಕ್ಕಾಗಿ ಅಲ್ಲಾಹನ ಕಡೆಗೆ ಓಡಿಹೋಗಲಿಕ್ಕಾಗಿ ಹಝ್ರತ್ ಪೈಗಂಬರರ(ಸ) ಬಳಿಯಿಂದ ಅಬಿಸೀನಿಯದ ಕಡೆಗೆ ವಲಸೆ ಹೋದರು. ಇದು ಇಸ್ಲಾಮಿನಲ್ಲಿ ನಡೆದ ಮೊದಲ ಹಿಜ್ರತ್ ಆಗಿತ್ತು.

ಅಬಿಸೀನಿಯದ ಕಡೆಗೆ ಹಿಜ್ರತ್ ಮಾಡಿದ ಸಹಾಬಿಯರಲ್ಲಿ ಹಝ್ರತ್ ಉಸ್ಮಾನ್(ರ) ಸಹ ತನ್ನ ಪತ್ನಿಯಾದ ಹಝ್ರತ್ ರುಖಿಯ ಬಿನ್ತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಇದ್ದರು.
(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-237-238, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಅನಸ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ಅಬಿಸೀನಿಯದ ಕಡೆಗೆ ವಲಸೆ ಹೋಗಲಿಕ್ಕಾಗಿ ಹೊರಟಾಗ ಅವರೊಂದಿಗೆ ಹಝ್ರತ್ ರುಖಿಯ ಬಿನ್ತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಹ ಇದ್ದರು. ಹಝ್ರತ್ ಪೈಗಂಬರರಿಗೆ(ಸ) ಈ ವಾರ್ತೆ ತಲುಪುವಾಗ ತಡವಾಗಿತ್ತು. ಅವರು ಹಿಜ್ರತ್ ಮಾಡಿದ್ದರೇ? ಎಲ್ಲಿಯ ವರೆಗೆ ತಲುಪಿದ್ದಾರೆ? ಸ್ಥಿತಿಗತಿಗಳೇನೆಂದು ಗೊತ್ತಾಗುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೊರಗೆ ಹೊರಟುಕೊಂಡು ಅವರಿಗೆ ಸಂಬಂಧಿಸಿದ ವಾರ್ತೆಗಾಗಿ ಕಾಯುತ್ತಿದ್ದರು. ಅನಂತರ ಸ್ತ್ರೀಯೊಬ್ಬಳು ಬಂದು ಅವರಿಗೆ ಸಂಬಂಧಿಸಿ ತಿಳಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಝ್ರತ್ ಲೂತ್ ಅಲೈಹಿಸ್ಸಲಾಮ್‌ರ ನಂತರ ಅಲ್ಲಾಹನ ಮಾರ್ಗದಲ್ಲಿ ತನ್ನ ಕುಟುಂಬದೊಂದಿಗೆ ಹಿಜ್ರತ್ ಮಾಡುವ

ಮೊದಲ ವ್ಯಕ್ತಿ ಉಸ್ಮಾನ್ ಆಗಿದ್ದಾರೆ. (ಮಜ್‌ಮಉಅರ್‌ಝ್ವಾಏದ್ ವ ಮಂಬಅಲ್ ಫವಾಏದ್, ಭಾಗ-9, ಪುಟ-58, ಹದೀಸ್-14498, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಸಅದ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಅಬಿಸೀನಿಯದ ಕಡೆಗೆ ಹಿಜ್ರತ್ ಮಾಡಲು ಉದ್ದೇಶಿಸಿದಾಗ ಹಝ್ರತ್ ಪೈಗಂಬರ್(ಸ) ಅವರೊಡನೆ ಹೇಳಿದರು: ರುಖಿಯರನ್ನು ಸಹ ನಿಮ್ಮೊಂದಿಗೆ ಕೊಂಡುಹೋಗಿರಿ. ನೀವು ಪರಸ್ಪರ ಧೈರ್ಯ ತುಂಬಿಸುವಿರಿ ಎಂದು ನಾನು ಭಾವಿಸುತ್ತೇನೆ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಸ್ಮಾ ಬಿನ್ತ್ ಅಬೂಬಕರ್‌ರೊಡನೆ ಹೇಳಿದರು: ಹೋಗು, ಅವರಿಬ್ಬರೂ ಹೋಗಿದ್ದಾರೆಯೇ? ಎಲ್ಲಿಯ ವರೆಗೆ ತಲುಪಿದ್ದಾರೆ? ಮತ್ತು ಸ್ಥಿತಿಗತಿಗಳು ಹೇಗಿದೆ ಎಂಬುದುರ ವಾರ್ತೆಯನ್ನು ತಿಳಿ. ಹಝ್ರತ್ ಅಸ್ಮಾ ಮರಳಿ ಬಂದಾಗ, ಹಝ್ರತ್ ಅಬೂಬಕರ್(ರ) ಸಹ ಹಝ್ರತ್ ಪೈಗಂಬರರ(ಸ) ಬಳಿ ಇದ್ದರು. ಹಝ್ರತ್ ಅಸ್ಮಾ ಹೇಳಿದರು: ಒಂದು ಕತ್ತೆಯ ಮೇಲೆ ಪಲ್ಲಕ್ಕಿ ಹಾಕಿಕೊಂಡು ಹಝ್ರತ್ ರುಖಿಯರನ್ನು ಅದರಲ್ಲಿ ಕುಳ್ಳಿರಿಸಿ ಹಝ್ರತ್ ಉಸ್ಮಾನ್(ರ) ಸಮುದ್ರದ ಕಡೆಗೆ ಹೊರಟು ಹೋದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ಹಝ್ರತ್ ಲೂತ್(ಅ) ಮತ್ತು ಹಝ್ರತ್ ಇಬ್ರಾಹೀಮ್(ಅ) ನಂತರ ಹಿಜ್ರತ್ ಮಾಡುವ ಮೊತ್ತಮೊದಲ ಇಬ್ಬರು ವ್ಯಕ್ತಿಗಳು ಉಸ್ಮಾನ್ ಮತ್ತು ರುಖಿಯ ಆಗಿದ್ದಾರೆ. (ಮುಸ್ತದ್ರಿಕ್, ಭಾಗ-4, ಪುಟ-414, ಕಿತಾಬ್ ಮಾರಿಫತಿಸ್ಸಹಾಬ, ಹದೀಸ್-6999, ದಾರುಲ್ ಫಿಕರ್ ಬೈರೂತ್ 2002)

ಅಬಿಸೀನಿಯದಿಂದ ಅವರ ಮರಳುವಿಕೆಯ ಘಟನೆ ಸಹ ವರದಿಯಾಗಿದೆ. ಇಬ್ನು ಇಸ್‌ಹಾಖ ಹೇಳುತ್ತಾರೆ: ಅಬಿಸೀನಿಯದ ಕಡೆಗೆ ವಲಸೆ ಹೋದ ಹಝ್ರತ್ ಪೈಗಂಬರರ(ಸ) ಸಹಾಬಿಯರಿಗೆ, ಮಕ್ಕದವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು ಎಂಬ ವಾರ್ತೆ ತಲುಪಿತು. ಆಗ ಮುಹಾಜಿರರು ಅಬಿಸೀನಿಯದಿಂದ ಮಕ್ಕದ ಕಡೆಗೆ ಮರಳಿ ಹೋದರು. ಇದು ತಪ್ಪಾದ ವಾರ್ತೆಯಾಗಿತ್ತು ಎಂದು ಅವರಿಗೆ ಮಕ್ಕದ ಸಮೀಪ ತಲುಪಿದಾಗ ಗೊತ್ತಾಯಿತು. ಹೀಗೆ ಅವರು ರಹಸ್ಯವಾಗಿ ಅಥವಾ ಯಾರದಾದರೂ ಅಭಯದಲ್ಲಿ ಮಕ್ಕದಲ್ಲಿ ಪ್ರವೇಶಿಸಿದರು. ಅವರಲ್ಲಿ ಕೆಲವರು ಅನಂತರ ಮದೀನಕ್ಕೆ ವಲಸೆ ಹೋಗಿದ್ದರು ಮತ್ತು ಬದ್ರ್ ಮತ್ತು ಉಹದ್ ಯುದ್ಧಗಳಲ್ಲಿ ಹಝ್ರತ್ ಪೈಗಂಬರರೊಂದಿಗೆ(ಸ) ಭಾಗವಹಿಸಿದ್ದರು. ಅವರಲ್ಲಿ ಕೆಲವರನ್ನು ಸತ್ಯನಿಷೇಧಿಗಳು ಮಕ್ಕದಲ್ಲೇ ತಡೆದಿದ್ದರು. ಅವರಿಗೆ ಬದ್ರ್ ಮುಂತಾದ ಯುದ್ಧಗಳಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅಬಿಸೀನಿಯದಿಂದ ಮರಳಿಬಂದು ಅನಂತರ ಮದೀನಕ್ಕೆ ಹಿಜ್ರತ್ ಮಾಡಿದವರಲ್ಲಿ ಹಝ್ರತ್ ಉಸ್ಮಾನ್(ರ) ಮತ್ತು ಅವರ ಪತ್ನಿಯಾದ ಹಝ್ರತ್ ರುಖಿಯ ಬಿನ್ತ್ ರಸೂಲುಲ್ಲಾಹ್(ಸ) ಇದ್ದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-265-266, ದಾರುಲ್ ಕುತುಬ್ ಇಲ್‌ಮಿ ಬೈರೂತ್ 2001)

ಹಝ್ರತ್ ಉಸ್ಮಾನ್(ರ) ಅಬಿಸೀನಿಯದಲ್ಲಿ ಕೆಲವು ವರ್ಷಗಳು ಇದ್ದರು ಎಂದು ಪುಸ್ತಕದಲ್ಲಿ ಒಂದು ಕಡೆ ಬರೆಯಲಾಗಿದೆ. ಅನಂತರ ಖುರೈಶಿಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವರು ಎಂಬ ತಪ್ಪಾದ ಸುದ್ದಿ ಹರಡಿದ ಕಾರಣದಿಂದ ಕೆಲವು ಸಹಾಬಿಯರು ತಮ್ಮ ನಾಡಿಗೆ ಮರಳಿಬಂದಾಗ, ಹಝ್ರತ್ ಉಸ್ಮಾನ್ ಸಹ ಮರಳಿಬಂದರು. ಇದು ತಪ್ಪು ವಾರ್ತೆಯಾಗಿತ್ತೆಂದು ಮಕ್ಕಕ್ಕೆ ಮರಳಿಬಂದಾಗ ಗೊತ್ತಾಯಿತು. ಈ ಕಾರಣದಿಂದ ಕೆಲವು ಸಹಾಬಿಯರು ಪುನಃ ಅಬಿಸೀನಿಯದ ಕಡೆಗೆ ವಾಪಾಸ್ಸು ಹೋದರು. ಆದರೆ ಮದೀನಕ್ಕೆ ಹಿಜ್ರತ್ ಹೋಗುವ ಕಾಲ ಬರುವ ವರೆಗೂ ಹಝ್ರತ್ ಉಸ್ಮಾನ್(ರ) ಮಕ್ಕದಲ್ಲೇ ನಿಂತರು. ಹಝ್ರತ್ ಪೈಗಂಬರ್(ಸ) ತಮ್ಮ ಎಲ್ಲ ಸಹಾಬಿಯರೊಡನೆ ಮದೀನಕ್ಕೆ ಹಿಜ್ರತ್ ಹೋಗಲು ಆದೇಶಿಸಿದರು. ಹೀಗೆ ಹಝ್ರತ್ ಉಸ್ಮಾನ್(ರ) ಸಹ ತಮ್ಮ ಕುಟುಂಬ ಸಮೇತ ಮದೀನಕ್ಕೆ ಹೋದರು. (ಸೈರುಸ್ಸಹಾಬ ಸಂಪುಟ-1, ಪುಟ-178, ಇದಾರ ಇಸ್ಲಾಮಿಯ ಅನಾರ್‌ಕಲಿ ಲಾಹೋರ್ ಪಾಕಿಸ್ತಾನ್)

ಒಂದು ವರದಿಯ ಪ್ರಕಾರ ಹಝ್ರತ್ ಉಸ್ಮಾನ್(ರ) ಪುನಃ ಅಬಿಸೀನಿಯದ ಕಡೆಗೆ ಹಿಜ್ರತ್ ಮಾಡಿದ್ದರು ಎಂದು ಬಂದಿದೆ. ಆದರೆ ಚರಿತ್ರೆಯ ಹೆಚ್ಚಿನ ಗ್ರಂಥಗಳಲ್ಲಿ ಹಝ್ರತ್ ಉಸ್ಮಾನ್(ರ) ಅಬಿಸೀನಯದ ಕಡೆಗೆ ಎರಡನೇ ಬಾರಿ ಹೋಗಿರುವ ಪ್ರಸ್ತಾಪ ಬಂದಿಲ್ಲ. ಅದಲ್ಲದೇ ಅಬಿಸೀನಿಯದ ಕಡೆಗೆ ಎರಡನೇ ಬಾರಿ ವಲಸೆ ಹೋದ ಬಗ್ಗೆಗಿನ ಕಾರಣದ ಕುರಿತು ಸೀರತ್ ಮತ್ತು ಹದೀಸಿನ ಗ್ರಂಥಗಳಲ್ಲಿ ವರದಿಯಾದದ್ದನ್ನು ಅದೇ ರೀತಿಯಲ್ಲಿ ಚರಿತ್ರೆಗಾರರು ಸಮ್ಮತಿಸುವುದಿಲ್ಲ. ಏಕೆಂದರೆ ಚರಿತ್ರೆಪರವಾಗಿ ಹಾಗೆ ಆಗಲು ಸಾಧ್ಯವಿಲ್ಲ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಮಾಡಿರುವ ಶೋಧನೆ ಮತ್ತು ಅನ್ವೇಷಣೆ ಆಧಾರದಲ್ಲಿ ಅವರು ಇದರ ಕುರಿತು ಬರೆದಿರುವರು. ಇದರ ಕೆಲವು ಭಾಗ ಹಿಂದೆ ಕೆಲವು ಸಹಾಬರ ಪ್ರಸ್ತಾಪದ ವೇಳೆ ಹೇಳಿದ್ದೆ. ಆದರೆ ಹೇಗಿದ್ದರೂ ಇಲ್ಲೂ ಅದರ ಬಗ್ಗೆ ಪ್ರಸ್ತಾಪಿಸುವುದು ಆವಶ್ಯ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: "ಮುಸ್ಲಿಮರ ಮೇಲೆ ಆಗುತ್ತಿರುವ ಕಷ್ಟತೆಗಳು ಮಿತಿಮೀರಿದಾಗ ಮತ್ತು ಖುರೈಶಿಗಳು ತೊಂದರೆ ನೀಡುವುದನ್ನು ವರ್ಧಿಸುತ್ತಾ ಹೋದಾಗ, ಹಝ್ರತ್ ಪೈಗಂಬರ್(ಸ) ಮುಸ್ಲಿಮರೊಡನೆ ಹೇಳಿದರು: "ಅಬಿಸೀನಿಯದ ಕಡೆಗೆ ವಲಸೆ ಹೋಗಿರಿ. ಅಬಿಸೀನಿಯದ ಅರಸ ನೀತಿ – ನ್ಯಾಯದಿಂದ ವರ್ತಿಸುವ ಅರಸರಾಗಿರುವರು. ಅವರ ರಾಜ್ಯದಲ್ಲಿ ಯಾರ ಮೇಲೂ ದೌರ್ಜನ್ಯ ನಡೆಯುತ್ತಿಲ್ಲ." ಅಬಿಸೀನಿಯ ದೇಶವು ಆಫ್ರಿಕ ಭೂಖಂಡದ ಉತ್ತರಪೂರ್ವದಲ್ಲಿ ಇದೆ. ದಕ್ಷಿಣ ಅರೇಬಿಯಕ್ಕೆ ನೇರ ಮುಂದಿದೆ. ಮಧ್ಯದಲ್ಲಿ ಕೆಂಪು ಸಮುದ್ರವಲ್ಲದೆ ಬೇರೆ ದೇಶವಿಲ್ಲ. ಆ ಕಾಲದಲ್ಲಿ ಅಬಿಸೀನಿಯದಲ್ಲಿ ಶಕ್ತವಾದ ಕ್ರೈಸ್ತ ಆಡಳಿತವಿತ್ತು. ಅಲ್ಲಿಯ ಅರಸನನ್ನು ನಜಾಶಿ ಎಂದು ಹೇಳಲಾಗುತ್ತಿತ್ತು. ಇಂದಿಗೂ ಅಲ್ಲಿಯ ಆಡಳಿತಗಾರರನ್ನು ಇದೇ ಹೆಸರಿನಿಂದ ಕರೆಯಲಾಗುತ್ತದೆ. ಅಬಿಸೀನಿಯದೊಂದಿಗೆ ಅರೇಬಿಯರಿಗೆ ವ್ಯಾಪಾರ ಸಂಬಂಧವಿತ್ತು. ಆ ಕಾಲದಲ್ಲಿ ಅಬಿಸೀನಿಯದ ರಾಜಧಾನಿ ಅಕ್ಸೂಮ್ ಆಗಿತ್ತು. ಅದು ಈಗಿನ ಪಟ್ಟಣವಾದ ಅದೋವದ ಸಮೀಪವಿದೆ. ಈಗಲೂ ಒಂದು ಪರಿಶುದ್ಧ ಪಟ್ಟಣದ ರೂಪದಲ್ಲಿ ಜನರು ಅಲ್ಲಿ ನೆಲೆಸಿದ್ದಾರೆ. ಅಕ್ಸೂಮ್ ಆ ದಿನಗಳಲ್ಲಿ ಒಂದು ಶಕ್ತಶಾಲಿ ಆಡಳಿತದ ಕೇಂದ್ರವಾಗಿತ್ತು. ಆ ಕಾಲದ ನಜಾಶಿಯ ಸ್ವಂತ ಹೆಸರು ಅಸಹ್‌ಮ ಎಂದಾಗಿತ್ತು. ಅವರು ನೀತಿವಂತ, ಬುದ್ಧಿಯುಳ್ಳ ಮತ್ತು ಶಕ್ತಿಶಾಲಿ ಅರಸನಾಗಿದ್ದರು. ಹೇಗಿದ್ದರೂ ಮುಸ್ಲಿಮರ ಮೇಲೆ ಆಗುತ್ತಿರುವ ಕಷ್ಟತೆಗಳು ಮಿತಿಮೀರಿದಾಗ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೇಳಿದರು: ಯಾರಿಗೆಲ್ಲ ಸಾಧ್ಯವೋ ಅವರು ಅಬಿಸೀನಿಯದ ಕಡೆಗೆ ವಲಸೆ ಹೋಗಿರಿ. ಹೀಗೆ ಹಝ್ರತ್ ಪೈಗಂಬರರ(ಸ) ನಿರ್ದೇಶನದ ಪ್ರಕಾರ ರಜಬ್ ತಿಂಗಳಲ್ಲಿ ಹನ್ನೊಂದು ಪುರುಷರು ಮತ್ತು ನಾಲ್ಕು ಸ್ತ್ರೀಯರು ಅಬಿಸೀನಿಯದ ಕಡೆಗೆ ಹಿಜ್ರತ್ ಮಾಡಿದರು. ಅವರಲ್ಲಿ ಹೆಚ್ಚು ಪ್ರಮುಖರ ಹೆಸರುಗಳು ಹೀಗಿವೆ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ಮತ್ತು ಅವರ ಪತ್ನಿ ರುಖಿಯ ಬಿನ್ತ್ ರಸೂಲುಲ್ಲಾಹ್(ಸ), ಅಬ್ದುರ್ರಹ್ಮಾನ್ ಬಿನ್ ಔಫ್, ಝುಬೇರ್ ಬಿನ್ ಅಲ್‌ಅವಾಮ್, ಅಬೂಹುದೈಫ ಬಿನ್ ಉತ್‌ಬ, ಉಸ್ಮಾನ್ ಬಿನ್ ಮಝ್‌ಊನ್, ಮುಸ್‌ಅಬ್ ಬಿನ್ ಉಮೈರ್, ಅಬೂಸಲ್ಮಾ ಬಿನ್ ಅಬ್ದುಲ್‌ಅಸದ್ ಮತ್ತು ಅವರ ಪತ್ನಿಯಾದ ಉಮ್ಮೇ ಸಲ್ಮಾ. ಈ ಆರಂಭದ ಮುಹಾಜಿರರಲ್ಲಿ ಹೆಚ್ಚಿನವರು ಖುರೈಶಿನ ಶಕ್ತಿಶಾಲಿ ಗೋತ್ರಗಳಿಗೆ ಸೇರಿದವರು ಆಗಿದ್ದರು. ದುರ್ಬಲ ಜನರು ಬಹಳ ಕಡಿಮೆಯಿದ್ದುವು. ಇದರಿಂದ ಎರಡು ಸಂಗತಿಗಳ ಬಗ್ಗೆ ಗೊತ್ತಾಗುತ್ತದೆ. ಒಂದು, ಶಕ್ತಿಶಾಲಿ ಗೋತ್ರಗಳಿಗೆ ಸೇರಿದವರು ಕೂಡ ಖುರೈಶಿಗಳ ಕೊಡುತ್ತಿದ್ದ ಪೀಡನೆಗಳಿಂದ ಸುರಕ್ಷಿತರಾಗಿರಲಿಲ್ಲ. ಎರಡು, ದುರ್ಬಲರಾದ ಗುಲಾಮರು ಮುಂತಾದವರು ಎಷ್ಟು ದುರ್ಬಲರೂ ನಿರ್ಗತಿಕರೂ ಆಗಿದ್ದರೂ ಎಂದರೆ ಅವರಿಗೆ ವಲಸೆ ಹೋಗಲಿಕ್ಕಾಗಿ ಬೇಕಾಗಿರುವ ಶಕ್ತಿ ಮತ್ತು ಸಂಪತ್ತು ಕೂಡ ಇರಲಿಲ್ಲ.

ಈ ಮುಹಾಜಿರರುಅ(ವಲಸೆಗಾರರು) ದಕ್ಷಿಣದ ಕಡೆಗೆ ಯಾತ್ರೆ ಮಾಡುತ್ತಾ, ಆ ಕಾಲದ ಅರೇಬಿಯದ ಬಂದರು ಪ್ರದೇಶವಾದ ಶಈಬ ತಲುಪಿದಾಗ, ಅಲ್ಲಾಹನ ಅಪಾರವಾದ ಅನುಗ್ರಹದಿಂದ ಅಬಿಸೀನಿಯಕ್ಕೆ ಹೋಗಲು ತಯಾರಾಗಿ ನಿಂತಿದ್ದ ವ್ಯಾಪಾರದ ಹಡಗು ಅವರಿಗೆ ಲಭಿಸಿತು. ಹೀಗೆ ಅವರು ಸಮಾಧಾನದಿಂದ ಅದರಲ್ಲಿ ಸವಾರರಾದರು ಮತ್ತು ಹಡಗು ರವಾನೆಯಾಯಿತು. ಮಕ್ಕದ ಖುರೈಶಿಗಳಿಗೆ ಅವರ ಹಿಜ್ರತ್ ಬಗ್ಗೆ ಗೊತ್ತಾದಾಗ ಕೈಯಿಂದ ಬಿಟ್ಟುಹೋಯಿತು ಎಂಬ ಕಾರಣದಿಂದ ತುಂಬ ಕೋಪಗೊಂಡರು. ಹೀಗೆ ಅವರು ಮುಹಾಜಿರರನ್ನು ಹಿಂಬಾಳಿಸಲು ಹೊರಟರು. ಆದರೆ ಅವರು ಸಮುದ್ರ ತೀರಕ್ಕೆ ತಲುಪಿದಾಗ, ಹಡಗು ರವಾನೆಯಾಗಿತ್ತು. ಆದ್ದರಿಂದ ವಿಫಲಗೊಂಡು ಸೋತು ವಾಪಾಸ್ಸು ಆದರು. ಅಬಿಸೀನಿಯಕ್ಕೆ ತಲುಪಿಕೊಂಡು ಮುಸ್ಲಿಮರಿಗೆ ಅತ್ಯಂತ ಶಾಂತಿಯ ಜೀವನ ಲಭಿಸಿತು. ಬಹಳ ಕಷ್ಟದಿಂದ ಖುರೈಶಿಯರ ದೌರ್ಜನ್ಯದಿಂದ ಮುಕ್ತಿ ಪಡೆದರು. ಆದರೆ ಕೆಲವು ಚರಿತ್ರೆಗಾರರು ಹೇಳುವಂತೆ, ಮುಹಾಜಿರರು ಅಬಿಸೀನಿಯಕ್ಕೆ ಹೋಗಿ ಹೆಚ್ಚು ಸಮಯವಾಗಿರಲಿಲ್ಲ. ಅಷ್ಟರಲ್ಲಿ ಎಲ್ಲ ಖುರೈಶಿಗಳು ಮುಸ್ಲಿಮರಾಗಿದ್ದಾರೆ ಮತ್ತು ಮಕ್ಕದಲ್ಲಿ ಈಗ ಸಂಪೂರ್ಣ ಶಾಂತಿ ಸಮಾಧಾನ ಉಂಟಾಗಿದೆ ಎಂಬ ಗಾಳಿಮಾತು ಅವರಿಗೆ ತಲುಪಿತು. ಈ ವದಂತಿಯ ಕಾರಣದಿಂದ ಹೆಚ್ಚಿನ ಮುಹಾಜಿರರು ಏನೂ ಯೋಚಿಸದೇ ಅರಿಯದೇ ಮರಳಿ ಬಂದರು. ಈ ಜನರು ಮಕ್ಕದ ಸಮೀಪ ಬಂದಾಗ ಈ ವಾರ್ತೆ ತಪ್ಪಾಗಿತ್ತು ಎಂದು ಗೊತ್ತಾಯಿತು. ಈಗ ಅವರಿಗೆ ದೊಡ್ಡದಾದ ಆಪತ್ತು ಎದುರಿಸಬೇಕಾಗಿ ಬಂತು. ಕೊನೆಗೆ ಕೆಲವರು ಮಾರ್ಗಮಧ್ಯ ಮರಳಿ ಹೋದರು. ಇನ್ನು ಕೆಲವರು ರಹಸ್ಯವಾಗಿ ಅಥವಾ ಯಾವುದಾದರೂ ಪ್ರಭಾವಶಾಲಿ ಮತ್ತು ಶಕ್ತಿಶಾಲಿ ವ್ಯಕ್ತಿಯ ಅಭಯ ಮತ್ತು ಸಂರಕ್ಷಣೆಯಲ್ಲಿ ಮಕ್ಕದಲ್ಲೇ ಇದ್ದರು. ಇದು ನಬವಿ ವರ್ಷದ ಶವ್ವಾಲ್ ಐದರ ಘಟನೆಯಾಗಿತ್ತು. ಎಂದರೆ ಮೊದಲ ಹಿಜ್ರತ್ ಮತ್ತು ಮುಹಾಜಿರರ ಮರಳುವಿಕೆ ನಡುವೆ ಕೇವಲ ಎರಡುವರೆ ಅಥವಾ ಮೂರು ತಿಂಗಳಷ್ಟು ದೂರವಿತ್ತು. ಇದು ಸತ್ಯದಲ್ಲಿ ಮುಹಾಜಿರರನ್ನು ಮರಳಿ ತರಲು ಮತ್ತು ಅವರಿಗೆ ಕಷ್ಟತೆ ಕೊಡುವ ಉದ್ದೇಶದಿಂದ

ಹರಡಲಾದ ಸಂಪೂರ್ಣ ಸುಳ್ಳು ಮತ್ತು ಆಧಾರರಹಿತ ವದಂತಿಯಾಗಿತ್ತು. ಹೆಚ್ಚು ಗಮನವಿಟ್ಟು ನೋಡುವುದಾದರೆ, ಈ ವದಂತಿ ಮತ್ತು ಮುಹಾಜಿರರ ಮರಳುವಿಕೆಯ ಕಥೆಯೇ ಆಧಾರರಹಿತವೆಂದು ತೋರುತ್ತದೆ. ಆದರೆ ಇದನ್ನು ಸರಿಯೆಂದು ಭಾವಿಸುವುದಾದರೆ, ಅದರ ಹಿಂದೆ ಕೆಲವು ಹದೀಸುಗಳಲ್ಲಿ ವರದಿಯಾದ ಒಂದು ಘಟನೆಯಿರಬಹುದು. ಹೀಗೆ ನೋಡುವುದಾದರೆ ಹಝ್ರತ್ ಉಸ್ಮಾನ್(ರ) ಕೆಲವು ವರ್ಷಗಳು ಅಬಿಸೀನಿಯದಲ್ಲಿ ಇದ್ದರು ಎಂಬ ವರದಿ ಸರಿಯೆಂದು ತೋರುವುದಿಲ್ಲ. ಇದನ್ನು ಸರಿಯೆಂದು ತಿಳಿಯುವುದಾದರೆ ಮೂರು ನಾಲ್ಕು ತಿಂಗಳಲ್ಲಿ ಮರಳಿ ಬಂದಿದ್ದರು ಎಂಬುದು ತಪ್ಪಾಗುತ್ತದೆ. ಹೇಗಿದ್ದರೂ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರ(ರ) ಪ್ರಕಾರ ಈ ಸಂಗತಿ ತಪ್ಪೇ ಆಗಿದೆ. ಅವರು ಬರೆಯುತ್ತಾರೆ: ಇದನ್ನು ಸರಿಯೆಂದು ಭಾವಿಸುವುದಾದರೆ, ಅದರ ಹಿಂದೆ ಕೆಲವು ಹದೀಸುಗಳಲ್ಲಿ ವರದಿಯಾದ ಒಂದು ಘಟನೆಯಿರಬಹುದು. ಅದೇನೆಂದರೆ, ಬುಖಾರಿಯಲ್ಲಿ ವರದಿಯಾದಂತೆ ಒಂದು ಸಲ ಹಝ್ರತ್ ಪೈಗಂಬರ್(ಸ) ಕಅಬದ ಹೊರಗೆ ಸೂರಃ ನಜ್ಮ್‌ನ ಆಯತ್ತುಗಳನ್ನು ಓದಿದರು. ಆಗ ಅಲ್ಲಿ ಸತ್ಯನಿಷೇಧಿಗಳ ಕೆಲವು ಸರದಾರರು ಮತ್ತು ಕೆಲವು ಮುಸ್ಲಿಮರು ಇದ್ದರು. ಹಝ್ರತ್ ಪೈಗಂಬರ್(ಸ) ಸೂರಃ ಓದಿ ಮುಗಿಸಿದಾಗ, ಸಜದಃ ಮಾಡಿದರು. ಹಝ್ರತ್ ಪೈಗಂಬರರೊಂದಿಗೆ(ಸ) ಎಲ್ಲ ಮುಸ್ಲಿಮರು ಮತ್ತು ಸತ್ಯನಿಷೇಧಿಗಳು ಸಜದ ಮಾಡಿದರು. ಹೇಗಿದ್ದರೂ ಸತ್ಯನಿಷೇಧಿಗಳು ಏಕೆ ಸಜ್‌ದ ಮಾಡಿದ್ದರು ಎಂದು ಹದೀಸುಗಳಲ್ಲಿ ವಿವರಿಸಲಾಗಿಲ್ಲ. ಆದರೆ ಅಲ್ಲಾಹನ ಏಕತ್ವ, ಅವನ ಶಕ್ತಿ ಮತ್ತು ಸಾಮರ್ಥ್ಯದ ಬಗ್ಗೆ ಮತ್ತು ಅವನ ಔದಾರ್ಯಗಳ ಬಗ್ಗೆ ಅತ್ಯಂತ ಉತ್ತಮ ರೀತಿಯಲ್ಲಿ ಹೇಳಲಾದ ಆ ದೈವಿಕ ವಚನಗಳನ್ನು ಹಝ್ರತ್ ಪೈಗಂಬರ್(ಸ) ಅತ್ಯಂತ ಪ್ರಭಾವಶಾಲಿ ಸ್ವರದೊಂದಿಗೆ ಪಾರಾಯಣ ಮಾಡಿದಾಗ, ಮಾತ್ರವಲ್ಲ ಅದರಲ್ಲಿ ಶಕ್ತಿಶಾಲಿ ವಚನಗಳ ಮೂಲಕ ಖುರೈಶಿಗಳನ್ನು ಎಚ್ಚರಿಸಲಾಗಿತ್ತು. ಎಂದರೆ ಅವರು ಪೀಡನೆ ಕೊಡುವುದರಿಂದ ದೂರವಿರದಿದ್ದರೆ, ಅಲ್ಲಾಹನ ಪ್ರವಾದಿಗಳನ್ನು ನಿಷೇಧಿಸಿದ ಮುಂಚಿನ ಸಮುದಾಯಗಳಿಗೆ ಉಂಟಾದ ಸ್ಥಿತಿ ನಿಮ್ಮದೂ ಆಗುವುದು ಎಂಬ ಮುನ್ನೆಚ್ಚರಿಕೆ ಅದರಲ್ಲಿ ಇದ್ದುದ್ದನ್ನು ಕೇಳಿದಾಗ ಮತ್ತು ಅಲ್ಲಾಹನ ಮುಂದೆ ಸಾಷ್ಟಾಂಗವೆರಗಿರಿ ಎಂದು ಆ ವಚನಗಳ ಕೊನೆಯಲ್ಲಿ ಇರುವ ಆದೇಶವನ್ನು ಕೇಳಿದಾಗ, ಹಝ್ರತ್ ಪೈಗಂಬರ್(ಸ) ಮತ್ತು ಎಲ್ಲ ಮುಸ್ಲಿಮರು ಸಾಷ್ಟಾಂಗವೆರಗಿದರು. ಈ ವಚನಗಳ ಮತ್ತು ಈ ದೃಶ್ಯಗಳ ಅದ್ಭುತಕರವಾದ ಪ್ರಭಾವ ಖುರೈಶಿಗಳ ಮೇಲೆ ಉಂಟಾದಾಗ ಅವರು ಅನಿಯಂತ್ರಿತರಾಗಿ ಮುಸ್ಲಿಮರೊಂದಿಗೆ ಸಾಷ್ಟಾಂಗವೆರಗಿದರು. ಇದು ಅಚ್ಚರಿಯ ಸಂಗತಿಯೇನಲ್ಲ. ಏಕೆಂದರೆ ಇಂತಹ ಸಂದರ್ಭಗಳಲ್ಲಿ ಕೆಲವು ವೇಳೆ ಮನುಷ್ಯನ ಹೃದಯ ಕಂಪನಗೊಳ್ಳುತ್ತದೆ ಮತ್ತು ಅನಿಯಂತ್ರಿತವಾಗಿ ಅವನ ನಂಬಿರುವ ಧರ್ಮದ ತತ್ವಗಳಿಗೆ ವಿರುದ್ಧವಾದ ಸಂಗತಿಯನ್ನು ಕೂಡ ಮಾಡಿಬಿಡುತ್ತಾನೆ. ಅದನ್ನು ಅಂಗೀಕರಿಸಿದ ಕಾರಣ ಹೀಗೆ ಆಗಿರಬೇಕೆಂದೇನೂ ಇಲ್ಲ. ಅನಿಯಂತ್ರಿತವಾಗಿ ಹೀಗೆ ಆಗುತ್ತದೆ. ಕೆಲವು ವೇಳೆ ಕಠಿಣ ಮತ್ತು ಅಪ್ರತೀಕ್ಷಿತವಾದ ಆಪತ್ತಿನ ಸಮಯದಲ್ಲಿ ಒಬ್ಬ ನಾಸ್ತಿಕನು ಅಲ್ಲಾಹ್ ಅಲ್ಲಾಹ್ ಅಥವಾ ರಾಮ ರಾಮ ಎಂದು ಕರೆಯುತ್ತಾನೆ. ನಾನು ಸಹ ಕೆಲವು ನಾಸ್ತಿಕರೊಡನೆ ಇದರ ಬಗ್ಗೆ ಕೇಳಿದ್ದೇನೆ. 'ಇದು ಸರಿಯಾದ ಸಂಗತಿಯಾಗಿದೆ. ನಮಗೆ ದೇವನ ಮೇಲೆ ವಿಶ್ವಾಸವಿಲ್ಲ. ಆದರೆ ಕೆಲವು ಅಪಾಯಕಾರಿ ಸನ್ನಿವೇಶಗಳಲ್ಲಿ ಅನಿಯಂತ್ರಿತವಾಗಿ ದೇವನ ಹೆಸರು ಹೊರಡುತ್ತದ ಎಂದು ಕೆಲವು ನಾಸ್ತಿಕರು ಹೇಳಿದ್ದಾರೆ.' ಹೇಗಿದ್ದರೂ ಖುರೈಶಿಗಳು ನಾಸ್ತಿಕರು ಆಗಿರಲಿಲ್ಲ. ಅವರು ದೇವನ ಅಸ್ತಿತ್ವವನ್ನು ನಂಬುವವರಾಗಿದ್ದರು. ಒಟ್ಟಿನಲ್ಲಿ ಪ್ರತಾಪ ಮತ್ತು ವೈಭವಶಾಲಿ ವಚನಗಳ ಪಾರಾಯಣದ ನಂತರ ಮುಸ್ಲಿಮರ ಸಂಘ ಒಂದೇ ಸವನೇ ಸಜದಃ ಮಾಡಿದಾಗ, ಅದರ ಅದ್ಭುತಕರವಾದ ಪ್ರಭಾವದಿಂದ ಖುರೈಶಿಗಳು ಸಹ ಅನಿಯಂತ್ರಿತವಾಗಿ ಸಾಷ್ಟಾಂಗ ಮಾಡಿದರು. ಆದರೆ ಇಂತಹ ಪ್ರಭಾವ ಕ್ಷಣಿಕ ಮತ್ತು ತಾತ್ಕಾಲಿಕವಾಗಿರುತ್ತದೆ. ಮನುಷ್ಯನು ಬೇಗನೇ ತನ್ನ ಪೂರ್ವ ಸ್ಥಿತಿಗೆ ಮರಳುತ್ತಾನೆ. ಇಲ್ಲೂ ಹಾಗೆಯೇ ಆಯಿತು. ಸಜದಃ ಮಾಡಿದ ನಂತರವೂ ಖುರೈಶಿಗಳು ವಿಗ್ರಹ ಆರಾಧಕರೇ ಆಗಿದ್ದರು. ಅವರು ಏಕದೇವ ವಿಶ್ವಾಸಿಗಳಾಗಲಿಲ್ಲ. ಹೇಗಿದ್ದರೂ ಈ ಘಟನೆ ಪ್ರಬಲವಾದ ಹದೀಸುಗಳಿಂದ ಸಾಬೀತಾಗಿದೆ.

ಒಟ್ಟಿನಲ್ಲಿ ಅಬಿಸೀನಿಯಕ್ಕೆ ಹೋದ ಮುಹಾಜಿರರ ಮರಳುವಿಕೆಯ ಘಟನೆ ಸರಿಯೇ ಆಗಿದ್ದರೆ, ಅಬಿಸೀನಿಯಕ್ಕೆ ಹೋದ ಮುಹಾಜಿರರನ್ನು ವಾಪಾಸ್ಸು ಕರೆಸಲು ಪ್ರಯತ್ನಿಸುತ್ತಿದ್ದ ಖುರೈಶಿಗಳು, ಸಜದ ಮಾಡಿದ ಈ ಘಟನೆಯನ್ನು ನೆಪವಾಗಿ ಮಾಡಿಕೊಂಡು ಮಕ್ಕದ ಖುರೈಶಿಗಳು ಮುಸ್ಲಿಮರಾದರು ಮತ್ತು ಈಗ ಮಕ್ಕದಲ್ಲಿ ಮುಸ್ಲಿಮರಿಗೆ ಸಮಾಧಾನದ ವಾತಾವರಣ ಸೃಷ್ಟಿಯಾಗಿದೆ ಎಂಬ ವದಂತಿಯನ್ನು ಹರಡಿದರು. ಈ ಗಾಳಿಮಾತು ಅಬಿಸೀನಿಯಕ್ಕೆ ಹೋದ ಮುಹಾಜಿರರಿಗೆ ತಲುಪಿದಾಗ ಸಹಜವಾಗಿಯೇ ಅವರು ತುಂಬ ಸಂತೋಷಗೊಂಡರು. ವಾರ್ತೆ ಕೇಳುತ್ತಲೇ ಸಂತೋಷದ ಆವೇಶದಿಂದ ಮರಳಿಹೋದರು. ಆದರೆ ಅವರು ಮಕ್ಕದ ಸಮೀಪ ತಲುಪಿದಾಗ ಸತ್ಯದ ಅರಿವಾಯಿತು. ಆಗ ಕೆಲವರು ರಹಸ್ಯವಾಗಿ ಮತ್ತು ಕೆಲವರು ಯಾರಾದರೂ ಶಕ್ತಿಶಾಲಿ ಮತ್ತು ಪ್ರಭಾವಶಾಲಿ ಖುರೈಶಿಗಳ ಸಂರಕ್ಷಣೆ ಮತ್ತು ಅಭಯದಲ್ಲಿ ಮಕ್ಕಕ್ಕೆ ಹೋದರು ಮತ್ತು ಕೆಲವರು ಮರಳಿ ಹೋದರು. ಒಟ್ಟಿನಲ್ಲಿ, ಖುರೈಶಿಗಳು ಮುಸ್ಲಿಮರಾದರು ಎಂಬ ವದಂತಿಯಲ್ಲಿ ಏನಾದರೂ ಸತ್ಯತೆಯಿದ್ದರೆ, ಅದು ಸೂರಃ ನಜಮಿನ ತಿಲಾವತ್ ಮಾಡಿದಾಗ ಸಜದ ಮಾಡಿದ ಘಟನೆಗೆ ಸಂಬಂಧಿಸಿದ ಸಂಗತಿಯಾಗಿರಲು ಮಾತ್ರ ಸಾಧ್ಯ. **ವಲ್ಲಾಹು ಅಅ್‌ಲಮ್.**

ಹೇಗಿದ್ದರೂ ಅಬಿಸೀನಿಯಕ್ಕೆ ಹೋದ ಮುಹಾಜಿರರು ಮರಳಿಬಂದದ್ದು ಸರಿಯೆಂದೇ ಭಾವಿಸುವುದಾದರೂ ಅವರಲ್ಲಿ ಹೆಚ್ಚಿನವರು ಮರಳಿ ಹೋಗಿದ್ದರು. ಹೀಗೆ ಖುರೈಶಿಗಳು ದಿನ ಕಳೆದಂತೆ ಮುಸ್ಲಿಮರಿಗೆ ಕಷ್ಟಕೊಡುವುದನ್ನು ವರ್ಧಿಸುತ್ತಿದ್ದರು. ಅವರ ದೌರ್ಜನ್ಯಗಳು ದಿನಾಲೂ ವರ್ಧಿಸುತ್ತಾ ಹೋಗುತ್ತಿತ್ತು. ಆದ್ದರಿಂದ ಹಝ್ರತ್ ಪೈಗಂಬರರ(ಸ) ನಿರ್ದೇಶನದ ಪ್ರಕಾರ ಇತರ ಮುಸ್ಲಿಮರು ಸಹ ರಹಸ್ಯವಾಗಿ ಹಿಜ್ರತ್ ಮಾಡಲು ಶುರುಮಾಡಿದರು. ಸಂದರ್ಭವನ್ನು ನೋಡಿ ಮೆಲ್ಲಮೆಲ್ಲನೇ ಮಕ್ಕದಿಂದ ಹೊರಡುತ್ತಿದ್ದರು. ಹಿಜ್ರತಿನ ಈ ಪರಂಪರೆ ಎಷ್ಟು ತೀವ್ರವಾಯಿತೆಂದರೆ, ಕೊನೆಗೆ ಅಬಿಸೀನಿಯಕ್ಕೆ ಹೋದ ಮುಹಾಜಿರರ ಸಂಖ್ಯೆ ನೂರೊಂದಾಯಿತು. ಅವರಲ್ಲಿ ಹದಿನೆಂಟು ಸ್ತ್ರೀಯರು ಇದ್ದರು. ಮಕ್ಕದಲ್ಲಿ ಹಝ್ರತ್ ಪೈಗಂಬರರ(ಸ) ಬಳಿ ಬಹಳ ಕಡಿಮೆ ಮುಸ್ಲಿಮರು ಬಾಕಿಯಾದರು ಈ ಹಿಜ್ರತನ್ನು ಕೆಲವು ಚರಿತ್ರೆಗಾರರು ಅಬಿಸೀನಿಯಕ್ಕೆ ಮಾಡಲಾದ ಎರಡನೇ ಹಿಜ್ರತ್ ಎಂದು ಕರೆದಿದ್ದಾರೆ.

ಅನಂತರ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ತಮ್ಮ ಒಂದು ವಿಶ್ಲೇಷಣೆಯನ್ನು ಹೀಗೆ ಹೇಳುತ್ತಾರೆ: ಮುಹಾಜಿರರ ಮರಳುವಿಕೆಯ ಘಟನೆಯನ್ನು ಸಂಶಯಾಸ್ಪದವನ್ನಾಗಿ ಮಾಡುವ ಇನ್ನೊಂದು ಘಟನೆಯಿದೆ. ಅದೇನೆಂದರೆ, ಚರಿತ್ರೆಯಲ್ಲಿ ಅಬಿಸೀನಿಯದ ಕಡೆಗೆ ಹಿಜ್ರತ್ ಮಾಡಿದ ತಾರೀಕು ನಬವೀ ವರ್ಷ ರಜಬ್ 5 ಎಂದೂ ಮತ್ತು ಸಜದದ ತಾರೀಕು ನಬವೀ ವರ್ಷ ರಮಝಾನ್ 5 ಎಂದು ಬರೆಯಲಾಗಿದೆ. ಅನಂತರ ಈ ವದಂತಿಯ ಕಾರಣದಿಂದ ಅಬಿಸೀನಿಯಕ್ಕೆ ಹೋದ ಮುಹಾಜಿರರು ನಬವಿ ವರ್ಷ ಶವ್ವಾಲ್ 5ಕ್ಕೆ ಮರಳಿ ಬಂದಿದ್ದರು ಎಂದು ಹೇಳಲಾಗಿದೆ. ಎಂದರೆ ಹಿಜ್ರತಿನ ಆರಂಭ ಮತ್ತು ಮುಹಾಜಿರರ ಮರಳುವಿಕೆಯ ಕಾಲದ ನಡುವೆ ಕೇವಲ 3 ತಿಂಗಳುಗಳ ಅಂತರವಿತ್ತು ಎಂದು ಹೇಳಬೇಕಾಗುತ್ತದೆ. ಸಜದದ ಘಟನೆಯ ತಾರೀಕಿನಿಂದ ಕಾಲಗಣನೆ ಮಾಡುವುದಾದರೆ ಈ ಕಾಲಾವಧಿ ಕೇವಲ ಒಂದು ತಿಂಗಳು ಮಾತ್ರವಾಗುತ್ತದೆ. ಇದು ಆ ಕಾಲದ ಸ್ಥಿತಿಗತಿಗಳ ದೃಷ್ಟಿಯಲ್ಲಿ ಖಂಡಿತವಾಗಿ ಅಸಾಧ್ಯವಾಗಿದೆ. ಮಕ್ಕ ಮತ್ತು ಅಬಿಸೀನಿಯದ ನಡುವೆ ಈ ಪರಿಮಿತವಾದ ಕಾಲಾವಧಿಯಲ್ಲಿ ಮೂರು ಯಾತ್ರೆಗಳನ್ನು ಪೂರ್ತಿ ಮಾಡುವುದು ಅಸಾಧ್ಯವಾಗಿತ್ತು. ಎಂದರೆ ಮೊದಲು ಮುಸ್ಲಿಮರು ಮಕ್ಕದಿಂದ ಅಬಿಸೀನಿಯಕ್ಕೆ ಹೋಗುವುದು. ಅನಂತರ ಖುರೈಶಿಗಳು ಮುಸ್ಲಿಮರಾದರು ಎಂಬ ವಾರ್ತೆಯೊಂದಿಗೆ ಮಕ್ಕದಿಂದ ಅಬಿಸೀನಿಯಕ್ಕೆ ಯಾರಾದರೂ ಹೋಗುವುದು. ಅನಂತರ ಅಬಿಸೀನಿಯಕ್ಕೆ ಹೋದ ಮುಸ್ಲಿಮರು ಅಬಿಸೀನಿಯದಿಂದ ಮಕ್ಕಕ್ಕೆ ವಾಪಾಸ್ಸು ಬರುವುದು. ಈ ಮೂರು ಯಾತ್ರೆಗಳು ಇಷ್ಟು ಅಲ್ಪ ಕಾಲದಲ್ಲಿ ಖಂಡಿತ ಸಾಧ್ಯವಲ್ಲ. ಸಜದದ ಕಾಲದಿಂದ ಮರಳುವಿಕೆಯ ಕಾಲದ ಅಂತರದಲ್ಲಿ ಎರಡು ಯಾತ್ರೆಗಳು ನಡೆಸುವುದು ಸಹ ಅಸಾಧ್ಯವಾಗಿತ್ತು. ಏಕೆಂದರೆ ಆ ಕಾಲದಲ್ಲಿ ಅಬಿಸೀನಿಯಕ್ಕೆ ಹೋಗಲು ಮೊದಲು ದಕ್ಷಿಣ ದಿಕ್ಕಿಗೆ ಬರಬೇಕಾಗಿತ್ತು. ಅನಂತರ ಅಲ್ಲಿಂದ ಹಡಗಿನಿಂದ ಕೆಂಪು ಸಮುದ್ರವನ್ನು ಪಾರುಮಾಡಿಕೊಂಡು ಆಫ್ರಿಕದ ದಡಕ್ಕೆ ತಲುಪಬೇಕಾಗಿತ್ತು. ಎಲ್ಲ ಸಮಯದಲ್ಲಿ ಹಡಗು ಸಹ ಇರುತ್ತಿರಲಿಲ್ಲ. ದಡದಿಂದ ಸಾಕಷ್ಟು ದೂರವಿರುವ ಅಕ್ಸೂಮ್ ರಾಜಧಾನಿಗೆ ತಲುಪಬೇಕಾಗುತ್ತಿತ್ತು. ಆ ಕಾಲದ ನಿಧಾನಗತಿಯ ಯಾತ್ರೆಯ ದೃಷ್ಟಿಯಲ್ಲಿ ಈ ರೀತಿಯ ಒಂದು ಯಾತ್ರೆ ಸಹ ಒಂದುವರೆ ಎರಡು ತಿಂಗಳುಗಳ ಕಾಲಾವಧಿಯಲ್ಲಿ ಖಂಡಿತ ಸಾಧ್ಯವಲ್ಲ. ಈ ರೀತಿಯಲ್ಲಿ ನೋಡುವುದಾದರೆ ಈ ಕಥೆಯೇ ತಪ್ಪು ಮತ್ತು ಆಧಾರರಹಿತವಾಗಿತ್ತು ಎಂದು ಸಾಬೀತಾಗುತ್ತದೆ. ಆದರೆ ಇದರಲ್ಲಿ ಏನಾದರೂ ಸತ್ಯತೆ ಇರುವುದಾದರೆ ಖಂಡಿತವಾಗಿಯೂ ಮೇಲೆ ಹೇಳಿದ ಸಂಗತಿಯಷ್ಟು ಮಾತ್ರವೇ ಇದರಲ್ಲಿ ಸತ್ಯತೆ ಇದೆ ಎಂದು ಹೇಳಬಹುದು. ವಲ್ಲಾಹು ಅಅ್‌ಲಮ್. (ಸೀರತ್ ಖಾತಮನ್ನಬೀಈನ್, ಪುಟ-146-152)

ಹೇಗಿದ್ದರೂ ಇದರ ಕಾರಣ ಏನೇ ಆಗಿದ್ದರೂ ಕೆಲವು ಕಾಲದ ನಂತರ ಹಝ್ರತ್ ಉಸ್ಮಾನ್(ರ) ಅಬಿಸೀನಯದಿಂದ ಮರಳಿಬಂದರು. ಹಝ್ರತ್ ಉಸ್ಮಾನ್‌ರ(ರ) ಮದೀನದ ಕಡೆಗೆ ಹಿಜ್ರತ್ ಮತ್ತು ಅವರ ಸಾಹೋದರ್ಯ ಸಂಬಂಧ ಸ್ಥಾಪನೆಯ ಪ್ರಸ್ತಾಪ ಹೀಗೆ ಬರುತ್ತದೆ. ಮುಹಮ್ಮದ್ ಬಿನ್ ಜಾಫರ್ ಬಿನ್ ಝುಬೇರ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ಮಕ್ಕದಿಂದ ಮದೀನಕ್ಕೆ ಹಿಜ್ರತ್ ಮಾಡಿದಾಗ, ಅವರು ಬನೂ ನಜ್ಜಾರಿನ ಗೋತ್ರದಲ್ಲಿ ಹಸ್ಸಾನ್ ಬಿನ್ ಸಾಬಿತ್‌ರ ಸಹೋದರ ಹಝ್ರತ್ ಔಸ್ ಬಿನ್ ಸಾಬಿತ್‌ರ ಮನೆಯಲ್ಲಿ ತಂಗಿದರು.

ಮೂಸಾ ಬಿನ್ ಮುಹಮ್ಮದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರ(ರ) ನಡುವೆ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದರು. ಒಂದು ವರದಿಯ ಪ್ರಕಾರ ಹಝ್ರತ್ ಶದ್ದಾದ್ ಬಿನ್ ಔಸ್‌ರ ತಂದೆಯಾದ ಹಝ್ರತ್ ಔಸ್ ಬಿನ್ ಸಾಬಿತ್(ರ) ಮತ್ತು ಹಝ್ರತ್ ಉಸ್ಮಾನ್‌ರ(ರ) ನಡುವೆ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು ಎಂದಿದೆ. ಹಝ್ರತ್ ಅಬುಉಬಾದ ಸಅದ್ ಬಿನ್ ಉಸ್ಮಾನ್ ಝುರ್‌ಖಿಯೊಂದಿಗೆ ಹಝ್ರತ್ ಉಸ್ಮಾನ್‌ರ(ರ) ಸಾಹೋದರ್ಯ ಸಂಬಂಧ ಸ್ಥಾಪಿಸಲಾಗಿತ್ತು ಎಂದೂ ಹೇಳಲಾಗುತ್ತದೆ.(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–31, ದಾರ್ ಅಹ್ಯಉತ್ತುರಾಸುಲ್ ಅರಬಿ ಬೈರೂತ್ 1996)

ಒಂದು ವರದಿಯು ಪ್ರಕಾರ ಹಝ್ರತ್ ಉಸ್ಮಾನ್‌ರ(ರ) ಸಾಹೋದರ್ಯ ಸಂಬಂಧವನ್ನು ಹಝ್ರತ್ ಪೈಗಂಬರ್(ಸ) ತಮ್ಮೊಂದಿಗೆ ಸ್ಥಾಪಿಸಿದ್ದಾಗಿ ಬಂದಿದೆ. ತಬ್‌ಖಾತುಲ್ ಕುಬ್ರದಲ್ಲಿ ಹೀಗೆ ಬರೆಯಲಾಗಿದೆ: ಇಬ್ನು ಲಬೀಬ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್‌ರನ್ನು ಶತ್ರುಗಳು ಸುತ್ತುವರೆದಾಗ, ಎಂದರೆ ಕೊನೆಯ ದಿನಗಳಲ್ಲಿ ಹಝ್ರತ್ ಉಸ್ಮಾನ್‌ರನ್ನು(ರ) ಶತ್ರುಗಳು ಸುತ್ತುವರೆದಾಗ, ಎಲ್ಲ ರೀತಿಯ ನಿರ್ಬಂಧವನ್ನು ಅವರ ಮೇಲೆ ಹೇರಿದಾಗ ಕೊಠಡಿಯ ಎತ್ತರದಲ್ಲಿ ಇದ್ದ ಕಿಟಕಿಯಿಂದ ಇಣುಕುತ್ತಾ ಹಝ್ರತ್ ಉಸ್ಮಾನ್(ರ) ಜನರೊಡನೆ ಕೇಳಿದರು: ನಿಮ್ಮ ನಡುವೆ ತಲ್‌ಹ ಇದ್ದಾರೆಯೇ? ಹೌದೆಂದು ಜನರು ಹೇಳಿದರು. ಅವರು ಹೇಳಿದರು: ಮುಹಾಜಿರರ ಮತ್ತು ಅನ್ಸಾರರ ನಡುವೆ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದಾಗ, ಹಝ್ರತ್ ಪೈಗಂಬರ್(ಸ) ತಮ್ಮೊಂದಿಗೆ ನನ್ನ ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದ್ದರು ಎಂಬುದು ನಿಮಗೆ ಗೊತ್ತೇ ಎಂದು ನಿಮ್ಮೊಡನೆ ಅಲ್ಲಾಹನ ಹೆಸರಲ್ಲಿ ಕೇಳುತ್ತೇನೆ. ಆಗ ಹಝ್ರತ್ ತಲ್‌ಹ(ರ) ಹೇಳಿದರು: ಅಲ್ಲಾಹನಾಣೆ, ಇದು ಸರಿಯೇ ಆಗಿದೆ. ಆಗ ಸುತ್ತುಮುತ್ತಲು ಇದ್ದ ವಿರೋಧಿಗಳು ಹಝ್ರತ್ ತಲ್‌ಹರೊಡನೆ ನೀವೇಕೆ ಹೀಗೆ ಹೇಳಿದ್ದೀರಿ ಎಂದು ಕೇಳಿದರು. ಆಗ ಹಝ್ರತ್ ತಲ್‌ಹ(ರ) ಬಹಳ ಧೈರ್ಯದಿಂದ ಹೀಗೆ ಹೇಳಿದರು: ಹಝ್ರತ್ ಉಸ್ಮಾನ್(ರ) ನನ್ನೊಡನೆ ಅಲ್ಲಾಹನ ಮೇಲೆ ಆಣೆ ಹಾಕಿ ಕೇಳಿದ್ದರು. ಅದು ಸಹ ನನ್ನ ಕಣ್ಣಮುಂದೆ ನಡೆದ ಘಟನೆಯ ಬಗ್ಗೆ ಕೇಳಿದ್ದರು. ಹೀಗಿರುವಾಗ ನಾನು ಅದಕ್ಕೆ ಸಾಕ್ಷ್ಯವಹಿಸಬೇಡವೇ.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–38, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ನನಗಂತು ಸುಳ್ಳು ಹೇಳಲು ಸಾಧ್ಯವಿಲ್ಲ. ನಿಮಗೆ ವಿರೋಧವಿದ್ದರೆ ಮಾಡುತ್ತಾ ಇರಿ.

ಹಝ್ರತ್ ರುಖಿಯರ(ರ) ನಿಧನ ಮತ್ತು ಹಝ್ರತ್ ಉಸ್ಮಾನ್‌ರ(ರ) ಹಝ್ರತ್ ಉಮ್ಮೇ ಕುಲ್ಸುಮ್‌ರೊಂದಿಗೆ(ರ) ನಡೆದ ವಿವಾಹದ ಘಟನೆ ಹೀಗೆ ವರದಿಯಾಗಿದೆ: ಅಬ್ದುಲ್ಲಾಹ್ ಬಿನ್ ಮಕ್‌ನಫ್ ಬಿನ್ ಹಾರಿಸ ಅನ್ಸಾರಿ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಬದ್ರ್ ಯುದ್ಧಕ್ಕಾಗಿ ರವಾನೆಯಾಗುವಾಗ ಹಝ್ರತ್ ಉಸ್ಮಾನ್‌ರನ್ನು(ರ) ತನ್ನ ಮಗಳಾದ ಹಝ್ರತ್ ರುಖಿಯರ(ರ) ಬಳಿ ಬಿಟ್ಟರು. ಹಝ್ರತ್ ರುಖಿಯ(ರ) ರೋಗಿಯಾಗಿದ್ದರು. ಬದ್ರ್ ಯುದ್ಧದಲ್ಲಿ ಅಲ್ಲಾಹನು ಹಝ್ರತ್ ಪೈಗಂಬರರಿಗೆ ನೀಡಿದ ವಿಜಯದ ಸಂತೋಷ ವಾರ್ತೆಯನ್ನು ಹೇಳುತ್ತಾ ಹಝ್ರತ್ ಝೈದ್ ಬಿನ್ ಹಾರಿಸ ಮದೀನಕ್ಕೆ ಬಂದ ದಿನ ಹಝ್ರತ್ ರುಖಿಯ(ರ) ನಿಧನರಾದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರಿಗೆ(ರ) ಬದ್ರ್‌ನ ಯುದ್ಧ ಸಂಪತ್ತಿನಿಂದ ಒಂದು ಭಾಗವನ್ನು ನಿಶ್ಚಯಿಸಿದರು. ಬದ್ರ್ ಯುದ್ಧದಲ್ಲಿ ಭಾಗವಹಿಸಿದವರಿಗೆ ಸಿಗುವಷ್ಟೇ ಭಾಗ ಅವರಿಗೂ ಸಿಕ್ಕಿತ್ತು. ಹಝ್ರತ್ ರುಖಿಯರ(ರ) ಮರಣದ ನಂತರ ಹಝ್ರತ್ ಪೈಗಂಬರ್(ಸ) ತನ್ನ ಮಗಳಾದ ಉಮ್ಮೇ ಕುಲ್ಸುಮ್‌ರ(ರ) ವಿವಾಹ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್‌ರೊಂದಿಗೆ(ರ) ಮಾಡಿಸಿಕೊಟ್ಟರು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–32, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರನ್ನು(ರ) ಮಸೀದಿಯ ಬಾಗಿಲ ಬಳಿ ಭೇಟಿಯಾಗಿ ಹೀಗೆ ಹೇಳಿದರು: ಹೇ ಉಸ್ಮಾನ್, ಜಿಬ್ರೀಲ್ ನನಗೆ ಹೀಗೆ ತಿಳಿಸಿದ್ದಾರೆ: ರುಖಿಯಗೆ ನೀಡಲಾದಷ್ಟೇ ಮಹರಿನೊಂದಿಗೆ ಉಮ್ಮೇ ಕುಲ್ಸುಮಿನ ನಿಕಾಹನ್ನು ನೀವು ಅವರೊಡನೆ ಉತ್ತಮವಾಗಿ ವರ್ತಿಸಬೇಕು ಎಂಬ ಶರತ್ತಿನೊಂದಿಗೆ ಅಲ್ಲಾಹನು ನಿಮ್ಮೊಂದಿಗೆ ಮಾಡಿದ್ದಾನೆ. (ಸುನನ್ ಇಬ್ನೆ ಮಾಜ, ಇಫ್ತೆತಾಹುಲ್ ಕಿತಾಬ್ ಫಝ್ಲ್ ಉಸ್ಮಾನ್(ರ) ಹದೀಸ್–110)

ಎಂದರೆ ಎರಡನೇ ಮಗಳ ನಿಕಾಹನ್ನು ಸಹ ಹಝ್ರತ್ ಉಸ್ಮಾನ್‌ರೊಡನೆ(ರ) ಮಾಡಲು ಅಲ್ಲಾಹನು ಹೇಳಿದನು.

ಹಝ್ರತ್ ಆಇಶ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಮ್ಮೇ ಕುಲ್ಸುಮ್‌ರ(ರ) ವಿವಾಹವನ್ನು ಹಝ್ರತ್ ಉಸ್ಮಾನ್‌ರೊಂದಿಗೆ(ರ) ಮಾಡಿಕೊಟ್ಟಾಗ, ಹಝ್ರತ್ ಪೈಗಂಬರ್(ಸ) ಹಝ್ರತ್ ಉಮ್ಮೇ ಐಮನ್‌ರೊಡನೆ(ರ) ಹೇಳಿದರು: ನನ್ನ ಮಗಳಾದ ಉಮ್ಮೇ ಕುಲ್ಸುಮ್‌ರನ್ನು ತಯಾರುಮಾಡಿ ಉಸ್ಮಾನ್‌ರ ಬಳಿ ಬಿಟ್ಟು ಬಾ. ಅವರ ಮುಂದೆ ಡೋಲು ಬಾರಿಸು. ಹೀಗೆ ಅವರು ಹಾಗೆಯೇ ಮಾಡಿದರು. ಹಝ್ರತ್ ಪೈಗಂಬರ್(ಸ) ಮೂರು ದಿನಗಳ ನಂತರ ಹಝ್ರತ್ ಉಮ್ಮೇ ಕುಲ್ಸುಮ್‌ರ ಬಳಿಗೆ ಹೋದರು ಮತ್ತು ಹೀಗೆ ಹೇಳಿದರು: ಹೇ ನನ್ನ ಪ್ರಿಯ ಪುತ್ರಿ, ನಿನ್ನ ಪತಿಯ ಬಗ್ಗೆ ನಿನ್ನ ಅಭಿಪ್ರಾಯವೇನು? ಹಝ್ರತ್ ಉಮ್ಮೇ ಕುಲ್ಸುಮ್(ರ) ಹೇಳಿದರು: ಅವರು ಅತ್ಯುತ್ತಮ ಪತಿಯಾಗಿರುವರು.
(ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್ ಶಖ್ಸಿಯ ವ ಅಸ್ರಹು, ಲೇಖಕ ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ–41, ಅಲ್‌ಫಸ್ಲ್ ಅವ್ವಲ್, ದಾರುಲ್ ಮಾರಿಫ ಬೈರೂತ್ 2006)

ಹಝ್ರತ್ ಉಮ್ಮೇ ಕುಲ್ಸುಮ್(ರ) ಹಝ್ರತ್ ಉಸ್ಮಾನ್‌ರ(ರ) ಬಳಿ ಹಿಜರೀ 9ರ ವರೆಗೆ ಇದ್ದರು. ಅನಂತರ ಅವರು ರೋಗಿಯಾಗಿ ಮೃತಪಟ್ಟರು. ಹಝ್ರತ್ ಪೈಗಂಬರ್(ಸ) ಅವರ ಜನಾಝ ನಮಾಝ್ ನಿರ್ವಹಿಸಿದರು ಮತ್ತು ಅವರ ಗೋರಿಯ ಬಳಿ ಕುಳಿತುಕೊಂಡರು. ಹಝ್ರತ್ ಅನಸ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಉಮ್ಮೇ ಕುಲ್ಸುಮ್‌ರ ಗೋರಿಯ ಬಳಿ ಕುಳಿತ್ತಿದ್ದಾಗ ಅವರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿರುವುದನ್ನು ನಾನು ಕಂಡೆನು. (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್ ಶಖ್ಸಿಯ ವ ಅಸ್ರಹು, ಲೇಖಕ ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ–42, ಅಲ್‌ಫಸ್ಲ್ ಅವ್ವಲ್, ದಾರುಲ್ ಮಾರಿಫ ಬೈರೂತ್ 2006)

ಬುಖ಼ಾರಿಯಲ್ಲಿ ಈ ಘಟನೆ ಹೀಗೆ ವರದಿಯಾಗಿದೆ: ಹಝ್ರತ್ ಅನಸ್ ಬಿನ್ ಮಾಲಿಕ್‌ರಿಂದ(ರ) ಹಿಲಾಲ್ ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರರ(ಸ) ಮಗಳ ಜನಾಝದಲ್ಲಿ ಇದ್ದೆವು. ಹಝ್ರತ್ ಪೈಗಂಬರ್(ಸ) ಖಬರಿನ ಬಳಿ ಕುಳಿತುಕಕೊಂಡಿದ್ದರು. ಅವರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿರುವುದನ್ನು ನಾನು ಕಂಡೆನು. (ಸಹೀಹ್ ಬುಖಾರಿ, ಕಿತಾಬುಲ್ ಜನಾಏಝ್, ಹದೀಸ್–1342, ಉರ್ದು ಸಹೀಹ್ ಬುಖಾರಿ, ಸಂಪುಟ–2, ಪುಟ–663, ನಝಾರತ್ ಇಶಾಅತ್ ರಬ್ವಾಹ್)

ಒಂದು ವರದಿಯ ಪ್ರಕಾರ ಹಝ್ರತ್ ಉಮ್ಮೇ ಕುಲ್ಸುಮ್(ರ) ವಫಾತಾದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಮೂರನೇ ಪುತ್ರಿ ಇರುತ್ತಿದ್ದರೆ ಅವಳ ವಿವಾಹವನ್ನು ಸಹ ಹಝ್ರತ್ ಉಸ್ಮಾನ್‌ರೊಂದಿಗೆ(ರ) ಮಾಡುತ್ತಿದ್ದೆ. (ಅತ್ತಬಖತುಲ್ ಕುಬ್ರ ಲಿಬ್ನೆ ಸಅದ್, ಭಾಗ–3, ಪುಟ–32, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ಸ್ಥಳದಿಂದ ದಾಟಿ ಹೋಗುತ್ತಿದ್ದಾಗ ಹಝ್ರತ್ ಉಸ್ಮಾನ್(ರ) ಹಝ್ರತ್ ಉಮ್ಮೇ ಕುಲ್ಸುಮ್ ಬಿನ್ತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ದುಃಖದಿಂದ ಅಳುತ್ತಿರುವುದನ್ನು ಕಂಡರು. ಹಝ್ರತ್ ಪೈಗಂಬರರೊಂದಿಗೆ(ಸ) ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಸಹ ಇದ್ದರು. ನೀವು ಯಾಕೆ ಅಳುತ್ತಿದ್ದೀರಿ ಎಂದು ಹಝ್ರತ್ ಪೈಗಂಬರ್(ಸ) ಅವರೊಡನೆ ಕೇಳಿದರು. ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನ ರಸೂಲರೇ, ನಿಮ್ಮ ಅಳಿಯನೆಂಬ ನನ್ನ ಸಂಬಂಧ ಕೊನೆಗೊಂಡ ಕಾರಣದಿಂದ ಅಳುತ್ತಿದ್ದೇನೆ. ನಿಮ್ಮ ಇಬ್ಬರು ಮಕ್ಕಳು ಸಹ ಮೃತಪಟ್ಟರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಳಬೇಡ. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಹೆಸರಲ್ಲಿ ಆಣೆಹಾಕಿ ಹೇಳುತ್ತೇನೆ, ನನಗೆ ನೂರು ಪುತ್ರಿಯರು ಇದ್ದು ಅವರಲ್ಲಿ ಪ್ರತಿಯೊಬ್ಬರು ಒಬ್ಬೊಬ್ಬರಾಗಿ ಮೃತಪಟ್ಟರೂ ನಾನು ಪ್ರತಿಯೊಬ್ಬರ ನಂತರ ಅವರ ವಿವಾಹವನ್ನು ನಿಮಗೆ ಮಾಡಿಕೊಡುತ್ತಿದ್ದೆ. ಆ ನೂರರಲ್ಲಿ ಒಬ್ಬರೂ ಬಾಕಿಯಾಗಿ ಉಳಿಯದ ತನಕ ಹೀಗೆ ಮಾಡುತ್ತಿದ್ದೆ. (ಕನ್ಝುಲ್ ಅವಾಲ್, ಭಾಗ–13, ಪುಟ–21, ಹದೀಸ್–36201, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2004)

ಹೇಗಿದ್ದರೂ ಇದು ಎರಡೂ ಕಡೆಯಿಂದ ಪರಸ್ಪರ ಇದ್ದ ಪ್ರೇಮದ ಒಂದು ಪ್ರಕಟನೆಯಾಗಿತ್ತು. ಇದು ಹಝ್ರತ್ ಉಸ್ಮಾನ್‌ರಿಗೆ(ರ) ಇದ್ದ ಒಂದು ಚಿಂತೆಯಾಗಿತ್ತು. ಈ ಸಂಬಂಧದ ನಂಟನ್ನು ಹಝ್ರತ್ ಪೈಗಂಬರ್(ಸ) ನೆಲೆನಿಲ್ಲಿಸಿದರು. ಈ ಸಂಬಂಧ ಸದಾ ನೆಲೆನಿಲ್ಲುವುದು ಎಂದು ಹಝ್ರತ್ ಪೈಗಂಬರ್(ಸ) ಅವರಿಗೆ ಭರವಸೆ ಕೊಟ್ಟರು. ಉಳಿದ ಪ್ರಸ್ತಾಪ ಮುಂದಿನ ಬಾರಿ ಮಾಡುತ್ತೇನೆ. ಇನ್ಶಾಅಲ್ಲಾಹ್.

ಪ್ರತಿ ಜುಮಾದಲ್ಲಿ ನಿಮ್ಮ ಗಮನವನ್ನು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವಕಡೆಗೆ ಸೆಳೆಯುತ್ತಿದ್ದೇನೆ. ಈಗಲೂ ದುಆ ಮಾಡಲು

ಹೇಳಬಯಸುತ್ತೇನೆ. ಎದುರಾಳಿಗಳು ತಮ್ಮ ಭಾವನೆಯಲ್ಲಿ ನಮ್ಮ ಕರ್ಮ ರಂಗವನ್ನು ಸಂಕುಚಿತಗೊಳಿಸುತ್ತಿದ್ದಾರೆ. ಆದರೆ ಅತ್ಯುನ್ನತನಾದ ಅಲ್ಲಾಹನು ಇದ್ದಾನೆ ಮತ್ತು ಅವನ ವಿಧಿ ಸಹ ಚಾಲ್ತಿಯಲ್ಲಿದೆ ಎಂದು ಇವರಿಗೆ ಗೊತ್ತಿಲ್ಲ. ಅವನು ತನ್ನ ವಲಯವನ್ನು ಅವರ ಮೇಲೆ ಸಂಕುಚಿತಗೊಳಿಸುತ್ತಿದ್ದಾನೆ. ಆ ವಲಯ ಸಂಕುಚಿತಗೊಂಡರೆ, ಅದರಿಂದ ಪರಾರಿಯಾಗಲು ಸಾಧ್ಯವಿಲ್ಲ. ಅಲ್ಲಾಹನು ಆ ಜನರಿಗೆ ಬುದ್ಧಿಕೊಡಲಿ. ಈ ಜನರು ಈಗಲಾದರೂ ವಿವೇಕದಿಂದ ವರ್ತಿಸಬೇಕು, ನ್ಯಾಯದಿಂದ ನಡೆಯಬೇಕು, ಅನಾವಶ್ಯಕವಾದ ದೌರ್ಜನ್ಯ ಮತ್ತು ಅತಿರೇಕದಿಂದ ಬಿಟ್ಟು ನಿಲ್ಲಬೇಕು. ಅದೇ ರೀತಿಯಲ್ಲಿ ಅಲ್ಜೀರಿಯಾದ ಜನರಿಗಾಗಿಯೂ ದುಆ ಮಾಡಿರಿ. ಅವರು ಈಮಾನಿನಲ್ಲಿ ನೆಲೆಯೂರುವಂತೆ ಆಗಲಿ. ಅದೇ ರೀತಿಯಲ್ಲಿ ಕೆಲವು ಬೇರೆ ಸ್ಥಳಗಳಲ್ಲಿಯೂ ಅಹ್ಮದಿಯರನ್ನು ಶಕ್ತವಾಗಿ ವಿರೋಧಿಸಲಾಗುತ್ತಿದೆ. ಅಲ್ಲಾಹನು ಪ್ರತಿಯೊಂದು ಸ್ಥಳದಲ್ಲಿ, ಪ್ರತಿಯೊಬ್ಬ ಅಹ್ಮದಿಯನ್ನು ಎಲ್ಲ ರೀತಿಯಲ್ಲಿ ಸಂರಕ್ಷಿಸಲಿ.

ನಮಾಝಿನ ನಂತರ ನಾನು ಕೆಲವು ಜನಾಝ಼ ಗಾಇಬ್ ಸಹ ನಿರ್ವಹಿಸುವೆನು. ಅವರ ಬಗ್ಗೆಗಿನ ಪ್ರಸ್ತಾಪವನ್ನು ನಾನಿಲ್ಲಿ ಮಾಡುತ್ತೇನೆ. ಮೊದಲನೆಯದಾಗಿ ಸನ್ಮಾನ್ಯ ಮೌಲಾನ ಸುಲ್ತಾನ್ ಮಹ್ಮೂದ್ ಅನ್ವರ್ ಸಾಹಿಬ್‌ರದ್ದಾಗಿದೆ. ಅವರು ಮಾಜಿ ನಾಝ಼ಿರ್ ಇಸ್ಲಾಹೋ ಇರ್ಶಾದ್ ಮರ್ಕಝ಼ಿಯಾ, ನಾಝ಼ಿರ್ ಖಿದ್‌ಮತೇ ದರ್ವೇಶಾನ್ ಮತ್ತು ನಾಝ಼ಿರ್ ಇಸ್ಲಾಹೋಇರ್ಶಾದ್ ರಿಶ್ತ ನಾತ ಸಹ ಆಗಿದ್ದರು. ಜನವರಿ 11ರಂದು ರಬ್ವದಲ್ಲಿ ಸುಮಾರು 88ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರ ತಂದೆಯ ಹೆಸರು ಚೌಧರಿ ಮುಹಮ್ಮದ್ ದೀನ್ ಎಂದಾಗಿತ್ತು ಮತ್ತು ತಾಯಿಯ ಹೆಸರು ರಹ್ಮತ್ ಬೀಬಿ ಎಂದಾಗಿತ್ತು. ಇವರತಂದೆ 1928ರಲ್ಲಿ ಹಝ಼್ರತ್ ಖ಼ಲೀಫತುಲ್ ಮಸೀಹ್ ಸಾನಿಯರ ಕೈಯಲ್ಲಿ ಬೈಅತ್ ಮಾಡಿ ಅಹ್ಮದಿಯ್ಯತಿನಲ್ಲಿ ಪ್ರವೇಶಿಸಿದ್ದರು. ಮೌಲಾನ ಸುಲ್ತಾನ್ ಮಹ್ಮೂದ್ ಸಾಹಿಬ್ ಅವರ ಏಕ ಮಗನಾಗಿದ್ದರು. ಮೌಲಾನ ಸುಲ್ತಾನ್ ಮಹ್ಮೂದ್ ಸಾಹಿಬ್ ಮಿಡಲ್ ತನಕ ಶಿಕ್ಷಣ ಪಡೆದ ನಂತರ ಎಪ್ರಿಲ್ 1946ರಲ್ಲಿ ವಖ್ಫ್ ಮಾಡಿದ ನಂತರ ಮದ್ರಸ ಅಹ್ಮದಿಯಾ ಖಾದಿಯಾನಿನಲ್ಲಿ ಪ್ರವೇಶನ ಪಡೆದರು. ಪಾಕಿಸ್ತಾನದ ನಿರ್ಮಾನದ ನಂತರ ಅಹ್ಮದ್ ನಗರದಲ್ಲಿಯ ಜಾಮಿಅ ಅಹ್ಮದಿಯಾಗೆ ಹೋದರು. ಅಲ್ಲಿಂದ 1952ರಲ್ಲಿ ಮೌಲವಿ ಫಾಝ಼ಿಲಿನ ಪರೀಕ್ಷೆಯನ್ನು ಬರೆದರು ಮತ್ತು ಎಪ್ರಿಲ್ 1956ರಲ್ಲಿ ಜಾಮಿಅ ಅಹ್ಮದಿಯಾದಿಂದ ಶಾಹಿದ್ ಡಿಗ್ರಿ ಪಡೆದರು. ಚೌಧರಿ ಸಅದುದ್ದೀನ್ ಸಾಹಿಬ್‌ರ ಮಗಳಾದ ಮಹ್ಮೂದ ಶೌಕತ್ ಸಾಹಿಬರನ್ನು ಇವರು ವಿವಾಹವಾದರು. ಅವರ ನಿಕಾಹನ್ನು 1960ರಲ್ಲಿ ಜಲ್ಸ ಸಾಲಾನದ ಸಂದರ್ಭದಲ್ಲಿ ಮೌಲಾನ ಜಲಾಲುದ್ದೀನ್ ಸಾಹಿಬ್ ಶಮ್ಸ್ ನಡೆಸಿದ್ದರು. ಅವರಿಂದ ಅವರಿಗೆ ನಾಲ್ವರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಮಕ್ಕಳಿದ್ದಾರೆ. ಅವರ ಒಬ್ಬ ಮಗನಾದ ಇಹ್ಸಾನ್ ಮಹ್ಮೂದ್ ವಖ್ಫೇಝ಼ಿಂದಗಿ ಯಾಗಿರುವವರು. ರಬ್ವದ ತಹ್ರೀಕ್‌ಜದೀದಿನ ಆಫಿಸಿನಲ್ಲಿ ಸೇವೆ ಮಾಡುವ ಸೌಭಾಗ್ಯವನ್ನು ಪಡೆಯುತ್ತಿದ್ದಾರೆ. ಸನ್ಮಾನ್ಯ ಮೌಲಾನ ಸಾಹಿಬ್‌ರ ಮೊದಲ ಪೋಸ್ಟಿಂಗ್ ಪಾಕಿಸ್ತಾನದ ಗುಜ್ರಾತಿನಲ್ಲಾಗಿತ್ತು. ಅದೇ ರೀತಿಯಲ್ಲಿ ಮುಬಲ್ಲಿಗ್ ಎಂಬ ನೆಲೆಯಲ್ಲಿ ಪಾಕಿಸ್ತಾನದ ಹಲವು ಪಟ್ಟಣಗಳಲ್ಲಿ ಸೇವೆಗಳನ್ನು ಸಲ್ಲಿಸಿದ್ದರು. 1974ರಿಂದ 1978ರ ತನಕ ಗಾನದಲ್ಲಿ ಸಹ ಇದ್ದರು. ನಾನು ಅಲ್ಲಿದ್ದಾಗ ಅವರು ಅಲ್ಲಿದ್ದರು. ಅವರು ಬಹಳ ನಿಸ್ವಾರ್ಥರಾಗಿ ಅಲ್ಲಿ ಸೇವೆ ಸಲ್ಲಿಸುವುದನ್ನು ನಾನು ಕಂಡಿದ್ದೇನೆ. 1982ರಿಂದ 1983ರ ತನಕ ಸೆಕ್ರಟರಿ ಮಜ್ಲಿಸ್ ಕಾರ್‌ಪರ್ದಾಝ಼್ ಸಹ ಆಗಿದ್ದರು. ಅನಂತರ ಅವರು 1983ರಲ್ಲಿ ಸದರ್ ಮಜ್ಲಿಸ್ ಕಾರ್‌ಪರ್ದಾಝ಼್‌ರಾಗಿ ನಿಶ್ಚಯಿಸಲ್ಪಟ್ಟರು. 1983ರಿಂದ 1998ರ ತನಕ ನಾಝ಼ಿರ್ ಇಸ್ಲಾಹೋಇರ್ಶಾದ್ ಮರ್ಕಝ಼ಿಯ ಆಗಿದ್ದರು. ಅನಂತರ 2011ರ ತನಕ ನಾಝ಼ಿರ್ ಖ಼ಿದ್‌ಮತ್ ದರ್ವೇಶಾನ್ ಆಗಿದ್ದರು. ಅನಂತರ 2011ರಿಂದ 2017 ತನಕ ನಾಝ಼ಿರ್ ರಿಶ್ತ ನಾತಆಗಿದ್ದರು. ರೋಗದ ಕಾರಣದಿಂದ 2017ರಲ್ಲಿ ನಿವೃತರಾದರು. ಅವರಿಗೆ ತಬ್ಲೀಗ್ ಮಾಡುವ, ಜನರೊಂದಿಗೆ ಮಾತುಕತೆ ನಡೆಸುವ ಮತ್ತು ಭಾಷಣ ಮಾಡುವ ಸಾಮರ್ಥ್ಯ ತುಂಬ ಇತ್ತು. ವಿವಿಧ ವಿಭಾಗಕ್ಕೆ ಸಂಬಂಧಿಸಿದ ಜನರೊಂದಿಗೆ ಮತ್ತು ಪಂಡಿತರೊಂದಿಗೆ ಭಿನ್ನಾಭಿಪ್ರಾಯವಿರುವ ವಿಷಯಗಳಲ್ಲಿ ಮಾತುಕತೆ ನಡೆಸಿದ ಹಲವು ಘಟನೆಗಳು ಇವೆ. ಬಹಳ ಉತ್ತಮವಾದ ಉತ್ತರಗಳನ್ನು ಕೊಡುತ್ತಿದ್ದರು. ನಾನು ಹೇಳಿದಂತೆ ಉತ್ತಮ ಭಾಷಣಗಾರರಾಗಿದ್ದರು. ಕೇಳುಗರನ್ನು ತನ್ನಕಡೆಗೆ ಸೆಳೆಯುತ್ತಿದ್ದರು. ನಮಗೆ ಮಾರ್ಗದರ್ಶಿ ಯಾಗಿದ್ದರು ಎಂದು ಇವರೊಂದಿಗೆ ಕೆಲಸ ಮಾಡುತ್ತಿದ್ದ ಮುಬಲ್ಲಿಗರು ಸಹ ಬರೆದಿದ್ದಾರೆ. ಅತ್ಯಂತ ಕರುಣೆಯಿಂದ ವರ್ತಿಸುತ್ತಿದ್ದರು, ಸ್ವತಃ ತಹಜ್ಜುದ್ ಮತ್ತು ಆರಾಧನೆ ನಡೆಸುವವರೂ ಹಾಗೂ ಜನರನ್ನು ಮತ್ತು ವಿಶೇಷವಾಗಿ ಮುಬಲ್ಲಿಗರನ್ನು ತಹಜ್ಜುದ್ ಹಾಗೂ ಆರಾಧನೆ ಮಾಡಲು ಉಪದೇಶಿಸುತ್ತಿದ್ದರು. ಖ಼ಿಲಾಫತಿನೊಂದಿಗೆ ನಿಷ್ಠೆಯ ಮತ್ತು ಅನುಸರಣೆಯ ಒಂದು ಅಸಾಮಾನ್ಯವಾದ ಮಟ್ಟವನ್ನು ಹೊಂದಿದ್ದರು. ಖ಼ಲೀಫತುಲ್ ಮಸೀಹ್ ರಾಬಿಅ್‌ರ ಕಾಲದಲ್ಲಿ ಕೆಲವು ಪರೀಕ್ಷಣೆಗಳನ್ನು ಅಲ್ಪವಾಗಿ ಅವರಿಗೆ ಎದುರಿಸಬೇಕಾಗಿ ಬಂದಿತ್ತು. ಆದರೆ ಪರಿಪೂರ್ಣ ನಿಷ್ಠೆಯೊಂದಿಗೆ ಅವರು ಆ ಕಾಲವನ್ನು ಕಳೆದರು ಮತ್ತು ಇತರರ ಅಡಿಯಲ್ಲಿ ಇದ್ದುಕೊಂಡು ಸಹ ಕೆಲಸ ಮಾಡಿದ್ದರು. ನೀವು ಮೊದಲು ನಾಝ಼ಿರ್ ಆಗಿದ್ದೀರಿ ಈಗ ನಾಝ಼ಿರ್ ಎಂಬ ನೆಲೆಯ ಬದಲಿಗೆ ಬೇರೆ ನಾಝ಼ಿರಿನ ಕೆಳಗೆ ಕೆಲಸಮಾಡಬೇಕಾಗಿ ಬಂದಿದೆ ಎಂದು ಒಮ್ಮೆ ಒಬ್ಬರು ಅವರೊಡನೆ ಹೇಳಿದಾಗ ಅವರು ಅದಕ್ಕೆ ಉತ್ತರವಾಗಿ ಹೀಗೆ ಹೇಳಿದರು: ಯಾರ ಆವಶ್ಯಕತೆ ಎಲ್ಲಿದೆ ಎಂದು ಖ಼ಲೀಫರಿಗೆ ಹೆಚ್ಚು ಗೊತ್ತಿದೆ. ನಾನು ವಖ್ಫ್ ಮಾಡಿದ್ದೇನೆ. ನನಗೆ ಕಸ ಗುಡಿಸುವ ಕೆಲಸ ಕೊಟ್ಟರೂ ನಾನು ಖ಼ಲೀಫರ ನಿರ್ದೇಶನದಂತೆ ಅದನ್ನೇ ಮಾಡುವೆನು. ಈ ಸಂಗತಿಯನ್ನು ಮುರಬ್ಬಿಗಳೂ ಮತ್ತು ಅವರ ಮಗಳು ಸಹ ಬರೆದಿರುವರು. ಅಲ್ಲಾಹನು ಅನಂತರ ಅವರ ಸ್ಥಿತಿಯನ್ನು ಸುಧಾರಿಸಿದನು. ಅವರ ಪರಿಪೂರ್ಣ ನಿಷ್ಠೆ ಮತ್ತು ಅನುಸರಣೆಯ ಮಾದರಿಯನ್ನು ಅಲ್ಲಾಹನು ಸ್ವೀಕರಿಸಿದನು ಎಂದು ನಾನು ತಿಳಿಯುತ್ತೇನೆ. ಅನಂತರ ಅವರು ಪುನಃ ಸದರ್ ಅಂಜುಮನ್ ಅಹ್ಮದಿಯಾದ ಮೆಂಬರ್ ಮತ್ತು ನಾಝ಼ಿರ್ ಸಹ ಆದರು. ಅವರು ಎಲ್ಲಿದ್ದರೂ ಅಮೀರರೊಂದಿಗೆ ಸಂಪೂರ್ಣವಾಗಿ ಸಹಕರಿಸಿ ಅನುಸರಣೆಯ ಮಾದರಿಯನ್ನು ತೋರಿಸುತ್ತಿದ್ದರು. ಕರಾಚಿಯಲ್ಲೂ ಮತ್ತು ಇತರ ಸ್ಥಳಗಳಲ್ಲೂ. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಅವರು ಕೆಲವು ಶೈಕ್ಷಣಿಕ ಕೆಲಸವನ್ನು ಸಹ ಮಾಡಿದ್ದರು. ಕೆಲವು ಪುಸ್ತಕಗಳನ್ನು ಬರೆದಿರುವರು. ಒಂದು ಕಲಿಮ ತಯ್ಯಿಬ ಕಿ ಅಝ಼್‌ಮತ್ ಕಾ ಖ಼ಿಯಾಂ ಅಹ್ಮದೀ ಕಿ ಪೆಹ್ಚಾನ್, ಎರಡು ಅಲ್ಲಾಹ್‌ತಆಲ, ಹಝ಼್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಂ, ಖುರ್‌ಆನ್ ಕರೀಂ ಓರ್ ಖಾನ ಕಅ್‌ಬ, ಮೂರು ಜಮಾಅತ್ ಅಹ್ಮದಿಯಾ ಕಾ ತಅ್‌ದಾದ್ ಕಾ ಮಸ್‌ಅಲ, ನಾಲ್ಕು ನಿಫಾರಝ಼್ ಶರೀಅತ್ ವೇ ನಾಕಾಮಿ ಕೇ ಅಸ್‌ಬಾಬ್, ಐದು ತೌಹೀನೇರಿಸಾಲತ್ ಕಿ ಸಝ಼ಾ.

ಹೇಗಿದ್ದರೂ ಇವು ಅವರ ಸಾಹಿತ್ಯ ರಂಗದ ಕೆಲಸಗಳಾಗಿವೆ. ನಾನು ಹೇಳಿದಂತೆ ಬಹಳ ಉತ್ತಮವಾಗಿ ಕೆಲಸ ಮಾಡುವವರಾಗಿದ್ದರು. ಅಲ್ಲಾಹನು ಅವರೊಂದಿಗೆ ಕಾರುಣ್ಯ ಮತ್ತು ಮಗ್‌ಫಿರತಿನಿಂದ ವರ್ತಿಸಲಿ.

ಎರಡನೇ ಜನಾಝ಼ ಮೌಲಾನ ಮುಹಮ್ಮದ್ ಉಮರ್ ಸಾಹಿಬ್‌ರದ್ದಾಗಿದೆ. ಅವರು ಖಾದಿಯಾನಿನ ಮಾಜಿ ನಾಝ಼ಿರ್ ಇಸ್ಲಾಹೋ ಇರ್ಶಾದ್ ಮರ್ಕಝ಼ಿಯಾ ಆಗಿದ್ದರು. ಅವರು ಪಿ.ಕೆ.ಇಬ್ರಾಹೀಂ ಸಾಹಿಬ್‌ರರ ಮಗನಾಗಿದ್ದರು. ಜನವರಿ 21ರಂದು 87ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಕೇರಳದವರಾಗಿದ್ದರು. ಇವರ ತಂದೆಯವರಾದ ಇಬ್ರಾಹೀಂ ಕುಟ್ಟಿ ಸಾಹಿಬರು ಜಮಾಅತಿನ ಕಠಿಣ ವಿರೋಧಿ ಮತ್ತು ಶತ್ರುವಾಗಿದ್ದರು. ಮೌಲಾನ ಸಾಹಿಬ್‌ರಜನನಕ್ಕೆ 10 ವರ್ಷ ಮುಂಚಿತವಾಗಿ ತಂದೆಯವರು ವ್ಯಾಪಾರಕ್ಕಾಗಿ ಮುಂಬಯಿಗೆ ಹೋಗಿದ್ದರು. ಆ ದಿನಗಳಲ್ಲಿ ಮುಂಬಯಿಯಲ್ಲಿ ಸಾಕಷ್ಟು ಅಹ್ಮದಿಯರು ವ್ಯಾಪಾರ ಮಾಡುತ್ತಿದ್ದರು. ಮುಂಬಯಿಯಲ್ಲಿ ಮಾಲಾಬಾರಿನ ಕೆಲವು ಅಹ್ಮದಿಯರೊಂದಿಗೆ ಅವರ ಭೇಟಿಯಾಯಿತು. ಅಹ್ಮದಿಯಾ ವಿಶ್ವಾಸದ ಬಗ್ಗೆ ಮಾತು ಕತೆ ನಡೆಯಿತು. 1924ರಲ್ಲಿ ಹಝ಼್ರತ್ ಖ಼ಲೀಫತುಲ್ ಮಸೀಹರು ಮುಂಬಯಿಗೆ ಹೋದಾಗ ಖ಼ಲೀಫತುಲ್ ಮಸೀಹರ ಕೈಯಲ್ಲಿ ಬೈಅತ್ ಮಾಡಿಕೊಂಡು ಅಹ್ಮದಿಯಾ ಜಮಾಅತಿಗೆ ಪ್ರವೇಶಿಸುವ ಸೌಭಾಗ್ಯವನ್ನು ಪಡೆದರು. ಅನಂತರ ಅವರಿಗೆ ಖಾದಿಯಾನಿಗೆ ಬರಲು ಸಹ ಸೌಭಾಗ್ಯ ಲಭಿಸಿತ್ತು.

ಮೌಲಾನ ಉಮರ್ ಸಾಹಿಬ್‌ರು 1954ರಲ್ಲಿ ಖಾದಿಯಾನಿಗೆ ಬಂದಿದ್ದರು. ಆವಾಗ ದೇಶದ ವಿಭಜನೆ ನಂತರ ಜಾಮಿಅ ಅಹ್ಮದಿಯಾ ಪುನಃ ಶುರುವಾಗಿತ್ತು. 1955ರಲ್ಲಿ ಮದ್ರಸದಲ್ಲಿ ಪ್ರವೇಶಿಸಿದ್ದರು. 1961ರಲ್ಲಿ ಮದ್ರಸ ಅಹ್ಮದಿಯಾ ಮತ್ತು ಪಂಜಾಬ್ ಯೂನಿವರ್ಸಿಟಿಯಿಂದ ಮೌಲವಿ ಫಾಝ಼ಿಲಿನ ಪರೀಕ್ಷೆ ತೇರ್ಗಡೆ ಮಾಡಿದ ನಂತರ ಒಂದು ವರ್ಷ ತನಕ ಮದ್ರಸದಲ್ಲಿ ಕಲಿಸುತ್ತಿದ್ದರು. ವಿದ್ಯಾರ್ಥಿಯಾಗಿದ್ದಾಗ ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸಹಾಬಿಯಾದ ಭಾಯಿ ಅಬ್ದುರ್ರಹ್ಮಾನ್ ಸಾಹಿಬ್ ಖಾದಿಯಾನಿಯ ಅಭಿಲಾಷೆ ಪ್ರಕಾರ ಮೌಲಾನ ಸಾಹಿಬ್‌ರಿಗೆ ಒಂದು ವರ್ಷದ ತನಕ ದಿನಾಲೂ ಬೆಳಿಗ್ಗೆ ಅವರ ಮನೆಯಲ್ಲಿ ಪವಿತ್ರ ಖುರ್‌ಆನ್ ಓದಿ ಹೇಳುವ ಸೌಭಾಗ್ಯವನ್ನು ಪಡೆದಿದ್ದರು. 1962ರಿಂದ ತಬ್ಲೀಗಿನ ಮೈದಾನದಲ್ಲಿ ಸೇವೆ ಸಲ್ಲಿಸಲು ಶುರುಮಾಡಿದರು. ಭಾರತದ ದೊಡ್ಡದೊಡ್ಡ ಪಟ್ಟಣಗಳಲ್ಲಿ ಕೆಲಸ ಮಾಡಿದ್ದರು. ಬಹಳ ವಿಜಯಿ ಮುಬಲ್ಲಿಗ್‌ರೆಂಬ ನೆಲೆಯಲ್ಲಿ ಸೇವೆ ಸಲ್ಲಿಸುತ್ತಾ ಇದ್ದರು. ತಬ್ಲೀಗಿನ ಸಭೆಗಳಲ್ಲಿ ಅವರ ಭಾಷಣಗಳು ಇರುತ್ತಿದ್ದುವು. ಯಾದ್‌ಗೀರಿನಲ್ಲಿ ನಡೆದ ಸಂವಾದದಲ್ಲಿ ಭಾಗವಹಿಸಿದ್ದರು. ಹಝ಼್ರತ್ ಖ಼ಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್‌ರ ವಿಶೇಷ ಮಾರ್ಗದರ್ಶನದಲ್ಲಿ 9 ದಿನಗಳು ನಿರಂತರವಾಗಿ ನಡೆದ ಕೋಯಂಬತ್ತೂರಿನ

ಚಾರಿತ್ರಿಕ ಸಂವಾದದಲ್ಲಿ ಮೌಲಾನ ದೋಸ್ತ್ ಮುಹಮ್ಮದ್ ಶಾಹಿದ್ ಸಾಹಿಬ್ ಮತ್ತು ಕೇಂದ್ರ ಪ್ರತಿನಿಧಿಯಾದ ಹಾಫಿಝ್ ಮುಝ್ಘಫರ್ ಸಾಹಿಬ್‌ರೊಂದಿಗೆ ಬಹಳ ಮುಖ್ಯವಾದ ಕೆಲಸ ಮಾಡಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಒಂದು ಕಡೆ ಇವರ ಕೆಲಸವನ್ನು ಪ್ರಶಂಸಿಸುತ್ತಾ ತನ್ನ ಒಂದು ಖುತ್ಬದಲ್ಲಿ ಹೀಗೆ ಹೇಳಿದ್ದರು: ಕೆಲವು ಜಮಾಅತುಗಳಲ್ಲಿ ಒಬ್ಬರೇ ವ್ಯಕ್ತಿ ಬೇಗನೇ ಜಮಾಅತಿನ ಭಾರವನ್ನು ಹೊರುತ್ತಾರೆ. ತರ್ಜುಮೆಗಳನ್ನು ಮಾಡಿಕೊಂಡು ವಿಫುಲವಾಗಿ ಅದನ್ನು ಪ್ರಚಾರ ಮಾಡುತ್ತಾರೆ. ಎಂದರೆ ಬೇಗನೇ ಖುತ್ಬಗಳ ತರ್ಜುಮೆ ಮಾಡಿಕೊಳ್ಳುತ್ತಾರೆ. ಅಲ್ಲಾಹನ ಅನುಗ್ರಹದಿಂದ ಇಂತಹ ಜಮಾಅತುಗಳು ಅಭಿವೃದ್ಧಿಗೊಳ್ಳುತ್ತವೆ. ಏಕೆಂದರೆ ಅವರಿಗೆ ಬೇಗನೇ ಕಾಲಘಟ್ಟದ ಖಲೀಫರ ಖುತ್ಬ ಸಿಗುತ್ತದೆ. ಏನಾಗುತ್ತಿದೆ ಎಂದು ನಮ್ಮ ಆ ಜಮಾಅತಿಗೆ ಗೊತ್ತಾಗುತ್ತದೆ. ಸೌತ್ ಇಂಡಿಯಾದಲ್ಲಿ ಉರ್ದು ಅರಿಯದ ನಮ್ಮ ಇಂತಹ ಜಮಾಅತುಗಳಲ್ಲಿ ಮುಬಲ್ಲಿಗ್‌ರಾದ ಮೌಲವಿ ಉಮರ್ ಸಾಹಿಬ್‌ರಿಗೆ ಅಲ್ಲಾಹನು ಇಂತಹ ಆವೇಶವನ್ನು ನೀಡಿದ್ದಾನೆ. ಇಲ್ಲಿಂದ ಅವರ ಕಿವಿಗೆ ಶಬ್ದ ತಲುಪುವಾಗ ಅವರು ಬೇಗನೇ ಅದರ ತರ್ಜುಮೆಗಳನ್ನು ಮಾಡಿಕೊಂಡು ಬೇಗನೇ ಎಲ್ಲ ಜಮಾಅತುಗಳಿಗೆ ತಲುಪಿಸುತ್ತಿದ್ದರು. ಒಟ್ಟಿನಲ್ಲಿ ಬಹಳ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದರು. ಸುಮಾರು ಒಂದು ವರ್ಷ ಫೆಲಸ್ತೀನಿನಲ್ಲಿ ಸಹ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಹಲವಾರು ಪುಸ್ತಕಗಳನ್ನು ಮಲಯಾಳಂ ಮತ್ತು ತಮಿಳು ಭಾಷೆಗಳಲ್ಲಿ ತರ್ಜುಮೆ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. 2007ರಲ್ಲಿ ನಾನು ಅವರನ್ನು ನಾಝಿರ್ ಇಸ್ಲಾಹೋ ಇರ್ಶಾದ್ ಮರ್ಕಝಿಯ ಎಂಬ ನೆಲೆಯಲ್ಲಿ ಅನಂತರ ಎಡಿಶನಲ್ ನಾಝಿರ್ ಇಸ್ಲಾಹೋಇರ್ಶಾದ್ ತಅ್‌ಲೀಮುಲ್ ಖುರ್‌ಆನ್ ಮತ್ತು ವಖ್ಫೇ ಆರ್‌ಝಿಯಾಗಿ ನಿಶ್ಚಯಿಸಿದ್ದೆ. ಅನಂತರ ನಾಇಬ್ ನಾಝಿರ್ ಅಅ್‌ಲಾ ಆಗಿ ಸೇವೆ ಸಲ್ಲಿಸಲು ಸಹ ಸೌಭಾಗ್ಯ ಪಡೆದರು. ಬಹಳ ಉತ್ತಮ ರೀತಿಯಲ್ಲಿ ಅವರು ಎಲ್ಲ ಸೇವೆಗಳನ್ನು ನಿರ್ವಹಿಸಿದ್ದರು. ಮದ್ರಸ ಅಹ್ಮದಿಯಾದಿಂದ ತೇರ್ಗಡೆಯಾದ ನಂತರ ಅವರಿಗೆ ಒಟ್ಟು 53 ವರ್ಷಗಳ ಕಾಲ ಜಮಾಅತಿನ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಅವರು ನಾಲ್ಕು ಪುತ್ರಿಯರನ್ನು, ಅಳಿಯಂದಿರನ್ನು, ಮೊಮ್ಮಕ್ಕಳನ್ನು ಮತ್ತು ಮೊಮ್ಮಕ್ಕಳ ಮಕ್ಕಳನ್ನು ಅಗಲಿರುವರು. ಅವರು ಜಮಾಅತಿನ ಸೇವೆಯ ಆವೇಶವನ್ನು ಹೊಂದಿದ್ದರು. ಕುಟುಂಬದೊಂದಿಗೆ ವೈಯಕ್ತಿಕ ಯಾತ್ರೆಯಲ್ಲಿ ಇರುವಾಗಲೂ ಜಮಾಅತಿನ ಕೆಲಸಗಳಲ್ಲಿ ವಿಶೇಷವಾಗಿ ತರ್ಜುಮೆಯ ಕೆಲಸಗಳಲ್ಲಿ ನಿರತರಾಗುತ್ತಿದ್ದರು.

ಶ್ರೀಲಂಕಾದ ನ್ಯಾಶನಲ್ ಸದರ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹ್ಮಹುಲ್ಲಾಹ್‌ರ ಅನುಗ್ರಹೀತ ನೇತೃತ್ವದಲ್ಲಿ ಮೌಲಾನ ಸಾಹಿಬ್‌ರ ಮೊದಲ ಪೋಸ್ಟಿಂಗ್ ಕೇಂದ್ರ ಮುಬಲ್ಲಿಗ್ ಎಂಬ ನೆಲೆಯಲ್ಲಿ 1978ರಲ್ಲಿ ಅಲ್ಲಾಹನ ಅನುಗ್ರಹದಿಂದ ಆದ ಸುವರ್ಣ ಕಾಲವು ಅಹ್ಮದಿಯಾ ಜಮಾಅತ್ ಶ್ರೀಲಂಕಾದ ಚರಿತ್ರೆಯಲ್ಲಿ ಸದಾ ಸುರಕ್ಷಿತವಾಗಿರುವುದು. ಆಗ ಅಸಾಧಾರಣವಾದ ರೀತಿಯಲ್ಲಿ ಜಮಾಅತಿನೊಳಗೆ ಹೊಸ ಆಧ್ಯಾತ್ಮಿಕ ಆವೇಶದೊಂದಿಗೆ ಸುಧಾರಣೆ ಮತ್ತು ಪರಿಶುದ್ಧ ಬದಲಾವಣೆ ಉಂಟಾಗಲು ಶುರುವಾಯಿತು. ದಿವಂಗತ ಮೌಲಾನ ಸಾಹಿಬ್‌ರು ಅಲ್ಲಿ ಅಮೂಲ್ಯವಾದ ಸೇವೆಗಳನ್ನು ಸಲ್ಲಿಸಿದ್ದರು. 1994ರಲ್ಲಿ ಕೊಲಂಬೋ ಪಟ್ಟಣದ ರಾಮಕೃಷ್ಣದ ದೊಡ್ಡ ಹಾಲಿನಲ್ಲಿ ಮೌಲಾನ ಸಾಹಿಬರ ಶಾಂತಿ ಮತ್ತು ಏಕತೆಯ ವಿಷಯದಲ್ಲಿ ಒಂದು ಪ್ರಚಂಡ ಭಾಷಣ ನಡೆಯಿತು. ಅದನ್ನು ಕೇಳಲು ನಾನ್ನೂರಕ್ಕಿಂತ ಹೆಚ್ಚಿನ ಜನರು ಬಂದಿದ್ದರು. ವಿಶೇಷವಾಗಿ ರಾಮಕೃಷ್ಣ ಮಿಶನಿನ ಸದರ್ ಮತ್ತು ರಾಷ್ಟ್ರೀಯ ಹಿಂದೂ ಕಲ್ಚರಲ್ ಮಿನಿಸ್ಟರ್ ಆದ ಆನ್‌ರೇಬಲ್ ದೇವರಾಜ್‌ರವರು ಭಾಷಣವನ್ನು ಆಲಿಸಿ ಭಾವಾವೇಶಗೊಂಡು ಬಹಳವಾಗಿ ಶ್ಲಾಘಿಸಿದರು. ಏಕೆಂದರೆ ಈ ಭಾಷಣದಲ್ಲಿ ಮೌಲಾನ ಸಾಹಿಬ್‌ರು ಭಗವತ್ ಗೀತೆಯ ವಚನಗಳಿಂದ ಮಂತ್ರವನ್ನು ಓದಿಕೊಂಡು ಹಝ್ರತ್ ಪೈಗಂಬರರ(ಸ) ಸತ್ಯತೆಯನ್ನು ಸಾಬೀತು ಪಡಿಸಿದ್ದರು. ಆದ ಕಾರಣ ಅವರ ಈ ಚಾರಿತ್ರಿಕ ಭಾಷಣ ಇಂದು ಸಹ ಆ ಜನರ ನಡುವೆ ಜನಪ್ರಿಯವಾಗಿದೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ನಾಲ್ಕು ಗ್ರಂಥಗಳನ್ನು ತಮಿಳು ಭಾಷೆಯಲ್ಲಿ ತರ್ಜುಮೆ ಮಾಡಿದ್ದರು. ವಿವಿಧ ವಿಷಯಗಳಲ್ಲಿ ಏಳು ಪುಸ್ತಕಗಳನ್ನು ತಮಿಳು ಭಾಷೆಯಲ್ಲಿ ಸ್ವತಃ ಬರೆದರು. ಸಮಾಧಾನ ವಝೀ ಎಂಬ ಜಮಾಅತಿನ ನಿಯತಕಾಲಿಕವನ್ನು ಶುರುಮಾಡಿ ತಮಿಳುನಾಡಿನಿಂದ ಪ್ರಕಟಿಸುತ್ತಿದ್ದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ, ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಪರಿಪೂರ್ಣ ನಿಷ್ಠೆಯಿಂದ ಜಮಾಅತಿನೊಂದಿಗೆ ಸಂಬಂಧವಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಫ್ಯಾಕ್ಟರಿ ಏರಿಯಾ ರಬ್ವದ ಮುಹಮ್ಮದ್ ಇಸ್ಮಾಈಲ್ ಸಾಹಿಬ್‌ರ ಮಗನಾದ ಸನ್ಮಾನ್ಯ ಮುರಬ್ಬೀ ಹಬೀಬ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಡಿಸೆಂಬರ್ 25ಕ್ಕೆ ಇಸ್ಲಾಮಾಬಾದ್‌ನಲ್ಲಿ ಹೃದಯಾಘಾತ ನಿಮಿತ್ತ 64ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 1979ರಲ್ಲಿ ಜಾಮಿಅದಿಂದ ತೇರ್ಗಡೆಯಾಗಿದ್ದರು. ಅನಂತರ ಅವರಿಗೆ ಪಾಕಿಸ್ತಾನದ ಹಲವು ಜಿಲ್ಲೆಗಳಲ್ಲಿ ಕೆಲಸ ಮಾಡಲು ಸೌಭಾಗ್ಯ ಲಭಿಸಿತ್ತು. 1989ರಿಂದ 2003ರ ತನಕ ನೈಜೀರಿಯಾದಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಆ ಸಂದರ್ಭದಲ್ಲಿ 1998 ಸೆಪ್ಟೆಂಬರ್‌ನಿಂದ ಅಕ್ಟೋಬರ್ 2000 ತನಕ ಅಮೀರ್ ಮತ್ತು ಮಿಶನರಿ ಇಂಚಾರ್ಜ್ ನೈಜೀರಿಯ ಸಹ ಆಗಿದ್ದರು. ವಿನಯ ಮತ್ತು ವಿಧೇಯತ್ವದೊಂದಿಗೆ ಸೇವೆ ಸಲ್ಲಿಸುತ್ತಿದ್ದರು. ಆಫೀಸ್ ಕೆಲಸಗಳಲ್ಲದೇ ಮೊಹಲ್ಲದ ತರಬೇತಿ ಪರವಾದ ಕೆಲಸಗಳು ಸಹ ಬಹಳ ಉತ್ತಮವಾಗಿ ಮಾಡುತ್ತಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೇ ಮೂವರು ಪುತ್ರಿಯರನ್ನು ಮತ್ತು ಇಬ್ಬರು ಪುತ್ರರನ್ನು ಅಗಲಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.ಅವರ ಮಕ್ಕಳಿಗೂ ನಿಷ್ಠೆಯಿಂದ ಜಮಾಅತಿನೊಂದಿಗೆ ನೆಲೆನಿಲ್ಲಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಸನ್ಮಾನ್ಯ ಬದ್ರುಝ್ಝಮಾನ್ ಸಾಹಿಬ್‌ರದ್ದಾಗಿದೆ. ಅವರು ಕೆಲವು ಕಾಲದಿಂದ ಯು.ಕೆ.ಯ ವಕಾಲತ್ ಮಾಲ್ ಆಫಿಸಿನ ಉದ್ಯೋಗಿಯಾಗಿದ್ದರು. ಜನವರಿ 3ರಂದು ದೇವವಿಧಿ ಪ್ರಕಾರ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅತ್ಯಂತ ಪ್ರಾಮಾಣಿಕ ಮತ್ತು ಪರಿಶ್ರಮಿ ಉದ್ಯೋಗಿಯಾಗಿದ್ದರು. 1944ರಲ್ಲಿ ಅಮೃತ್‌ಸರಿನಲ್ಲಿ ಅಹ್ಮದೀ ಕುಟುಂಬದಲ್ಲಿ ಹುಟ್ಟಿದ್ದರು. ಗವರ್‌ಮೆಂಟ್ ಸರ್ವೀಸ್ ಮಾಡುತ್ತಿದ್ದ ಕಾಲದಲ್ಲಿ ಕೋಯ್ಟ ಜಿಲ್ಲೆಯ ಖಾಇದ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಅನಂತರ ಅನ್ಸಾರುಲ್ಲಾಹ್ ಬಲೋಚಿಸ್ತಾನದ ನಾಝಿಂ ಸಹ ಆಗಿದ್ದರು. 1986ರಲ್ಲಿ ಅವರ ವಿರುದ್ಧ ಜಮಾಅತಿನ ಹೆಸರಲ್ಲಿ ಕೇಸ್ ನಡೆಸಲಾಯಿತು. ಇದರ ಕಾರಣದಿಂದ ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಸಹ ಆಗಿದ್ದರು. 1995ರಿಂದ 1999 ತನಕ ವಕಾಲತ್ ಮಾಲ್ ಅವ್ವಲ್ ರಬ್ವದಲ್ಲಿ ಸೇವೆ ಸಲ್ಲಿಸಿದರು. ಅನಂತರ ಲಂಡನಿಗೆ ಬಂದಾಗ, ರಖೀಂ ಪ್ರೆಸ್‌ನಲ್ಲಿ ಮತ್ತು ಹದಿನೇಳು ವರ್ಷಗಳು ವಕಾಲತ್ ಮಾಲ್ ಮತ್ತು ಎಡಿಶನಲ್ ವಕಾಲತ್ ಮಾಲ್ ಲಂಡನಿನಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಜಮಾಅತಿನ ಮುರಬ್ಬಿಯಾದ ಮೌಲವಿ ಮುಹಮ್ಮದ್ ಅಹ್ಮದ್ ನಈಂ ಸಾಹಿಬ್‌ರ ಮಗನಾದ ಸನ್ಮಾನ್ಯ ಮನ್ಸೂರ್ ಅಹ್ಮದ್ ತಹ್ಸೀನ್ ಸಾಹಿಬ್‌ರದ್ದಾಗಿದೆ. ಅವರು ರಬ್ವದ ನಝಾರತ್ ಉಮೂರೇ ಆಮ್ಮದ ಇಹ್ತಿಸಾಬ್ ವಿಭಾಗದ ಉದ್ಯೋಗಿಯಾಗಿದ್ದರು. ಇಲ್ಲಿ ಲಂಡನಿನಲ್ಲಿ ತನ್ನ ಮಗನ ಬಳಿಗೆ ಬಂದಿದ್ದರು. ಡಿಸೆಂಬರ್ 30ರಂದು 70ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಜೀವಿತದ 25 ವರ್ಷಗಳು ದೀನಿನ ಸೇವೆಗಾಗಿ ಜಮಾಅತಿನ ಉದ್ಯೋಗಿಯೆಂಬ ನೆಲೆಯಲ್ಲಿ ಹಲವು ಆಫಿಸ್‌ಗಳಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅತ್ಯಂತ ಉನ್ನತ ಮಟ್ಟದ ಸ್ನೇಹಮಯಿ, ಧರ್ಮಿಷ್ಠ ಮತ್ತು ಕೃಪಾಳು ವ್ಯಕ್ತಿಯಾಗಿದ್ದರು. ಖಿಲಾಫತಿನೊಂದಿಗೆ ಅಪರಿಮಿತವಾಗಿ ಪ್ರೀತಿಯನ್ನು ಹೊಂದಿದ್ದರು. ಇತರರನ್ನು ಇದರ ಬಗ್ಗೆ ಉಪದೇಶಿಸುತ್ತಿದ್ದರು. ಸಹನೆ ಮತ್ತು ತಾಳ್ಮೆಯಿಂದ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಸಾಮಾನ್ಯವಾಗಿ ಕ್ಲಿಷ್ಟಕರವಾದ ಸಮಸ್ಯೆಗಳನ್ನು ಅವರಿಗೆ ಒಪ್ಪಿಸಲಾಗುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಇರು ಪಕ್ಷದವರು ಕೋಪ ಮತ್ತು ಆವೇಶದೊಂದಿಗೆ ಆಫಿಸಿಗೆ ಬರುತ್ತಿದ್ದರು. ಆದರೆ ಅವರ ಪ್ರೀತಿ ಮತ್ತು ಸ್ನೇಹದ ವರ್ತನೆಯನ್ನು ಕಂಡು ಬಂದವರು ತಮ್ಮ ಕೋಪವನ್ನು ಹತೋಟಿಯಲ್ಲಿಡುತ್ತಿದ್ದರು. ಅನಂತರ ಅವರು ಸಮಸ್ಯೆಯನ್ನು ಬಗೆಹರಿಸುತ್ತಿದ್ದರು. ಜಮಾಅತಿನ ಸೇವೆಯ ಬಗ್ಗೆ ಅವರಿಗೆ ಇದ್ದ ಆವೇಶದ ಬಗ್ಗೆ ಅವರು ಪತ್ನಿ ಹೀಗೆ ಬರೆದಿರುವರು: ಅವರ ಮಗಳಾದ ಡಾಕ್ಟರ್ ಫಾರಿಯ ಮನ್ಸೂರ್‌ನ ವಲೀಮದ ಆಮಂತ್ರಣದ ದಿನ ಬೆಳಿಗ್ಗೆ ತಯಾರಾಗಿ ಆಫಿಸಿಗೆ ಹೋಗಲು ತಯಾರಾದಾಗ ನಾನು ಹೇಳಿದೆ: ಮದುವೆಯ ಮನೆಯಾಗಿದೆ. ಇಂದು ರಜೆ ಮಾಡಿರಿ. ಅವರು ಅದಕ್ಕೆ ಹೀಗೆ ಉತ್ತರಿಸಿದರು: ಔತನದ ಸಮಯ 2 ಗಂಟೆಗೆ ಆಗಿದೆ. ಸಮಯವನ್ನು ಏಕೆ ವ್ಯರ್ಥಮಾಡಬೇಕು. ನಾನೀಗ ಆಫೀಸಿಗೆ ಹೋಗುತ್ತೇನೆ. ಸಮಯವಾಗುವಾಗ ಬರುವೆನು. ಉನ್ನತ ಆಫೀಸರರೊಂದಿಗೆ ಗೌರವಾದರದೊಂದಿಗೆ ವರ್ತಿಸುತ್ತಿದ್ದರು. ಯಾವುದಾದರೂ ವಿಷಯದಲ್ಲಿ ಭಿನ್ನಾಭಿಪ್ರಾಯ ಇರುವುದಾದರೆ, ಗೌರವವನ್ನು ಗಮನದಲ್ಲಿಟ್ಟುಕೊಂಡು ಸದಾ ತಮ್ಮ ಅಭಿಪ್ರಾಯವನ್ನು ಮುಂದಿರಿಸುತ್ತಿದ್ದರು. ದಿವಂಗತರು ತನ್ನ ಪತ್ನಿಯಾದ ರುಖ್‌ಶಂದ ಸಾಹಿಬ, ಇಬ್ಬರು ಪುತ್ರರನ್ನು ಮತ್ತು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್

ಮತ್ತು ಕಾರುಣ್ಯದಿಂದ ವರ್ತಿಸಲಿ. ಚಿಕ್ಕಂದಿನಿಂದ ನನಗೆ ಅವರ ಪರಿಚಯವಿತ್ತು. ನನ್ನೊಂದಿಗೆ ಕಲಿಯುತ್ತಿದ್ದರು. ಅವರಲ್ಲಿ ಬಹಳ ಸಭ್ಯತೆಯಿತ್ತು. ಮುಗುಳ್ನಗೆ ಮತ್ತು ಹಸನ್ಮುಖದ ಸ್ವಭಾವವನ್ನು ಹೊಂದಿದ್ದರು. ಎಂದಿಗೂ ಕೋಪಗೊಳ್ಳುತ್ತಿರಲಿಲ್ಲ, ಎಂದಿಗೂ ಜಗಳವಾಡುತ್ತಿರಲಿಲ್ಲ. ಈ ಸ್ವಭಾವಗುಣ ಅವರೊಳಗೆ ಕೊನೆಯ ತನಕವಿತ್ತು. ಇದೇ ಕಾರಣದಿಂದ ಅವರು ಜನರ ನಡುವೆ ರಾಜಿ ಮಾಡಿಸುವ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದ್ದರು.

ಮುಂದಿನ ಜನಾಝ಼ ತನ್ಸಾನಿಯದ ಡಾಕ್ಟರ್ ಐದಿ ಇಬ್ರಾಹೀಂ ಮವಾಂಗ ಸಾಹಿಬ್‌ರದ್ದಾಗಿದೆ. ಡಿಸೆಂಬರ್ 9ರಂದು 73ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮೆಡಿಕಲ್ ವಿಭಾಗದಲ್ಲಿ ಮಕ್ರೀರ ಯೂನಿವರ್ಸಿಟಿ ಯೂಗಂಡದಲ್ಲಿ ದಾಖಲಾದರು. ಅಲ್ಲಾಹನ ಅನುಗ್ರಹದಿಂದ ಈಸ್ಟ್ ಆಫ್ರಿಕದ ಮೊದಲ ಲೋಕಲ್ ಅಹ್ಮದಿ ಡಾಕ್ಟರ್ ಆಗುವ ಗೌರವವನ್ನು ಪಡೆದರು. ಡಾಕ್ಟರ್ ಸಾಹಿಬ್‌ರಿಗೆ ಯೌವ್ವನದಲ್ಲೇ ಬೈಅತ್ ಮಾಡುವ ಸೌಭಾಗ್ಯ ಲಭಿಸಿತ್ತು. ಸ್ಕೂಲಿನ ಕಾಲದಲ್ಲೇ ಧಾರ್ಮಿಕ ವಿಷಯಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ನಾಮಧಾರಿಗಳಾದ ಇಸ್ಲಾಮಿನ ಪಂಡಿತರ ಕಡೆಯಿಂದ ಜಮಾಅತಿನ ಮೇಲೆ ಆಗುತ್ತಿದ್ದ ಅಸಂಖ್ಯ ಆಕ್ಷೇಪಗಳ ಕಾರಣದಿಂದ ಅವರ ಹೃದಯದಲ್ಲಿ ಜಮಾಅತಿನ ಬಗ್ಗೆ ಅರಿಯುವ ಆಸಕ್ತಿ ಉಂಟಾಗಿತ್ತು. ಅದೇ ಕಾಲದಲ್ಲಿ ಅವರು ಮುಬಲ್ಲಿಗ್‌ರಾದ ಶೇಖ್ ಅಬುಲ್ ತಾಲಿಬ್ ಸಾಂದಿ ಸಾಹಿಬ್‌ರನ್ನು ಭೇಟಿಯಾದರು. ಅವರು ಅವರ ಸಂಬಂಧಿಕರು ಸಹ ಆಗಿದ್ದರು. ಅವರೊಡನೆ ಈ ಆಕ್ಷೇಪಗಳ ಬಗ್ಗೆ ಮಾತುಕತೆ ನಡೆಸಿದಾಗ ಶೇಖ್ ಸಾಹಿಬ್‌ರು ವಿಶದವಾಗಿ ಆಧಾರರಹಿತವಾದ ಆರೋಪಗಳಿಗೆ ಉತ್ತರಗಳನ್ನು ಕೊಟ್ಟರು ಮತ್ತು ಅಹ್ಮದಿಯಾ ಜಮಾಅತಿನ ಕಡೆಯಿಂದ ಪ್ರಕಟಿಸಲಾದ ಸ್ವಾಹೀಲಿ ಭಾಷೆಯ ತರ್ಜುಮತುಲ್ ಖುರ್‌ಆನ್ ಮತ್ತು ಇತರ ಪುಸ್ತಕಗಳನ್ನು ಕೊಟ್ಟರು. ಈ ಪುಸ್ತಕಗಳನ್ನು ಓದಿದ ನಂತರ ಡಾಕ್ಟರ್ ಸಾಹಿಬ್‌ರು ಬೈಅತ್ ಮಾಡಿದ್ದರು. ಅಲ್ಲಾಹನ ಅನುಗ್ರಹದಿಂದ ಅವರು ತಮ್ಮ ಬೈಅತ್ತಿನ ಪ್ರತಿಜ್ಞೆಯನ್ನು ಕೊನೆಯುಸಿರು ತನಕ ಪೂರೈಸಿದರು. ಯಾವಾಗಲೂ ಪ್ರತಿಯೊಂದು ವಿಭಾಗದ ಜನರಿಗೆ ಇಸ್ಲಾಂ ಮತ್ತು ಅಹ್ಮದಿಯ್ಯತ್ತಿನ ಸಂದೇಶವನ್ನು ತಲುಪಿಸುವುದರಲ್ಲಿ ಮಗ್ನರಾಗಿದ್ದರು. ತಬ್ಲೀಗಿಗಾಗಿ ಅವರ ಹೃದಯದಲ್ಲಿ ಒಂದು ಆವೇಶವಿತ್ತು. ಆದ್ದರಿಂದ ಅವರು ಅಹ್ಮದಿಯರು ಮತ್ತು ಅಹ್ಮದಿಯೇತರ ಎಡೆಯಲ್ಲಿ ಪರಿಚಿತರಾಗಿದ್ದರು. ಹೆಚ್ಚಾಗಿ ತಮ್ಮ ಬ್ಯಾಗಿನಲ್ಲಿ ಜಮಾಅತಿನ ಪುಸ್ತಕಗಳನ್ನು ಮತ್ತು ನಿಯತಕಾಲಿಕಗಳನ್ನು ಇಟ್ಟುಕೊಂಡು ಮಾರುಕಟ್ಟೆಗೆ ಹೋಗಿ ಮಾರುತ್ತಿದ್ದರು. ನೀವು ಡಾಕ್ಟರ್ ಆಗಿದ್ದುಕೊಂಡು ಪುಸ್ತಕಗಳನ್ನು ಏಕೆ ಮಾರಾಟ ಮಾಡುತ್ತಿದ್ದೀರಿ ಎಂದು ಜನರು ಕೇಳುತ್ತಿದ್ದರು. ಅದಕ್ಕೆ ಅವರು ಬಹಳ ಉತ್ತಮ ರೀತಿಯಲ್ಲಿ ಹೀಗೆ ಉತ್ತರಿಸುತ್ತಿದ್ದರು: "ನಾನು ಆಸ್ಪತ್ರೆಯಲ್ಲಿ ಇರುವಾಗ ಶರೀರದ ಚಿಕಿತ್ಸೆ ನಡೆಸುತ್ತೇನೆ. ಈಗ ನಾನು ಆತ್ಮದ ಚಿಕಿತ್ಸೆ ನಡೆಸುತ್ತಿದ್ದೇನೆ. ಈ ಎರಡೂ ಕಾರ್ಯಗಳನ್ನು ಬೇರ್ಪಡಿಸಲು ಮತ್ತು ಇವುಗಳಲ್ಲಿ ಒಂದನ್ನು ಅವಗಣಿಸಲು ಸಾಧ್ಯವಲ್ಲ." ಖಿಲಾಫತ್ತಿನೊಂದಿಗೆ ಅಪರಿಮಿತವಾದ ಪ್ರೀತಿ ಮತ್ತು ವಿಶ್ವಾಸದ ಸಂಬಂಧವನ್ನು ಹೊಂದಿದ್ದರು. ಮಕ್ಕಳನ್ನು ಇಸ್ಲಾಮಿಕವಾದ ರೀತಿಯಲ್ಲಿ ಪಾಲನೆ ಪೋಷಣೆ ಮಾಡಿದ್ದರು. ಶಿಕ್ಷಣ ಮತ್ತು ತರಬೇತಿ ಕಡೆಗೆ ವಿಶೇಷವಾದ ಗಮನವಹಿಸಿದ್ದರು. ಮಕ್ಕಳೊಂದಿಗೆ ಮನೆಯಲ್ಲಿ ಜಮಾಅತಾದ ನಮಾಝಿನ ವ್ಯವಸ್ಥೆಯನ್ನು ಸಹ ಮಾಡಿದ್ದರು. ಮನೆಯಲ್ಲಿ ಒಂದು ಲೈಬ್ರರಿಯನ್ನು ಸಹ ಮಾಡಿದ್ದರು. ಅದರಲ್ಲಿ ವಿದ್ಯೆಯ ಇತರ ಪುಸ್ತಕಗಳೊಂದಿಗೆ ಜಮಾಅತಿನ ಪುಸ್ತಕಗಳನ್ನು ಸಹ ಇರಿಸಿದ್ದರು. ತನ್ನ ಮಕ್ಕಳು ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮಿನಲ್ಲಿ ನೆಲೆನಿಲ್ಲುವಂತಾಗಲು ಸ್ವತಃ ದುಆ ಮಾಡುತ್ತಿದ್ದರು ಮತ್ತು ಇತರರೊಡನೆ ದುಆ ಮಾಡಲು ಹೇಳುತ್ತಿದ್ದರು. ಜಮಾಅತಿನೊಂದಿಗೆ ಸೇರಿಕೊಂಡಿದ್ದರು. ಅವರ ಎಲ್ಲ ಮಕ್ಕಳು ಸಹ ಜಮಾಅತಿನೊಂದಿಗೆ ಸೇರಿಕೊಂಡಿರುವರು. ಮಕ್ಕಳು ಸಹ ತಂದೆಯ ಹಾಗೆ ಉತ್ತಮ ಸ್ವಭಾವವನ್ನು ಹೊಂದಿರುವವರು ಆಗಿರುವರು. ಅಲ್ಲಾಹನು ಅವರನ್ನು ಯಾವಾಗಲೂ ಜಮಾಅತಿನೊಂದಿಗೆ ಸೇರಿಸಿ ಇರಿಸಲಿ. ಅವರು ತಂದೆಯ ದುಆ ಮತ್ತು ಉತ್ತಮ ಅಭಿಲಾಷೆಗಳನ್ನು ಪೂರೈಸುವವರಾಗಲಿ. ಡಾಕ್ಟರ್ ಸಾಹಿಬ್‌ರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ಼ ಖಾದಿಯಾನಿನ ದರ್ವೇಶಾದ ದೀನ್ ಮುಹಮ್ಮದ್ ಸಾಹಿಬ್ ನಂಗ್ಲಿಯ ಪತ್ನಿಯಾದ ಸನ್ಮಾನ್ಯ ಸುಗ್ರ ಬೇಗಂ ಸಾಹಿಬರದ್ದಾಗಿದೆ. ಜನವರಿ 6ರಂದು 85ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸಹಾಬಿಯಾದ ಹಝ್ರತ್ ಹಕೀಂ ಮುಹಮ್ಮದ್ ರಮಝಾನ್ ಸಾಹಿಬ್ ರಝಿಯಲ್ಲಾಹು ಅನ್‌ಹುರ ಮಗಳಾಗಿದ್ದರು. ಉಪವಾಸ ಮತ್ತು ನಮಾಝನ್ನು ನಿರ್ವಹಿಸುವವರೂ ನಿಯತವಾಗಿ ತಹಜ್ಜುದ್ ನಮಾಝ್ ಅನುಷ್ಠಿಸುವವರೂ ಆಗಿದ್ದರು. ಅತಿಥಿ ಸತ್ಕಾರಿ, ಸಹನೆಹೊಂದಿರುವವರು, ಕೃತಜ್ಞತೆ ಉಳ್ಳವರೂ ಪರಿಶ್ರಮಿ, ಸಹಾನುಭೂತಿಯುಳ್ಳವರೂ ಮತ್ತು ಇತರ ಹಲವು ಉತ್ತಮ ಸ್ವಭಾವಗುಣಗಳನ್ನು ಹೊಂದಿದವರೂ ಆಗಿದ್ದ ಸಾತ್ವಿಕ ಸ್ತ್ರೀಯಾಗಿದ್ದರು. ಖಿಲಾಫತಿನೊಂದಿಗೆ ಅಪರಿಮಿತವಾದ ಸಂಬಂಧವನ್ನು ಹೊಂದಿದ್ದರು. ಹಲವು ವರ್ಷಗಳ ತನಕ ಲಜ್ನ ಇಮಾಇಲ್ಲಾಹ್‌ದಲ್ಲಿ ಸೆಕ್ರಟರಿ ಖಿದ್‌ಮತೇ ಖಲ್‌ಖ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಇಬ್ಬರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಒಬ್ಬ ಮಗನಾದ ಬಶೀರುದ್ದೀನ್ ಸಾಹಿಬ್‌ರಿಗೆ ನಲ್ವತ್ತು ವರ್ಷಗಳ ಕಾಲ ಅವರ ಸೇವೆ ಮಾಡಲು ಸೌಭಾಗ್ಯ ಪಡೆದಿದ್ದರು. ಮತ್ತೊಬ್ಬ ಮಗನಾದ ಮುನೀರುದ್ದೀನ್ ಸಾಹಿಬ್‌ರು ಈಗ ಖಾದಿಯಾನಿನ ತಾಮಿರಾತ್ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳ ಪ್ರಕಾರ ನಡೆಯಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ಼ ಸನ್ಮಾನ್ಯ ಚೌಧರಿ ಕರಾಮತುಲ್ಲಾಹ್ ಸಾಹಿಬ್‌ರದ್ದಾಗಿದೆ. ಡಿಸೆಂಬರ್ 26ರಂದು 95ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸಹಾಬಿಯಾದ ಹಝ್ರತ್ ಚೌಧರಿ ಶಾಹ್‌ದೀನ್ ಸಾಹಿಬ್ ಆಫ್ ಘಟಿಯಾಲಿಯಾರ ಮೊಮ್ಮಗರಾಗಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಸಿಯಾಲ್‌ಕೋಟಿಗೆ ಹೋದಾಗ ಆ ಸಹಾಬಿಗೆ ಬೈಅತ್ ಮಾಡುವ ಸೌಭಾಗ್ಯ ಸಿಕ್ಕಿತು. ದಿವಂಗತರು ಸಭ್ಯ, ಬಹಳ ಸ್ನೇಹಮಯಿ, ಬಡವರಿಗೆ ನೆರವು ನೀಡುವ, ನಿರ್ಗತಿಕರನ್ನು ಸಹಾಯ ಮಾಡುವ ಮತ್ತು ಎಲ್ಲ ಅವಸ್ಥೆಯಲ್ಲೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ಒಬ್ಬ ನಿಷ್ಠಾವಂತ ವ್ಯಕ್ತಿಯಾಗಿದ್ದರು.

ಅವರ ಮಗನಾದ ಸುಹೈಲ್ ಸಾಹಿಬ್ ಬರೆಯುತ್ತಾರೆ: ಅವರಲ್ಲಿ ಅತಿಥಿ ಸತ್ಕಾರದ ಗುಣ ವಿಶೇಷವಾಗಿತ್ತು. ವಖ್ಫೇ ಝಿಂದಗಿಯಾದವರು ಜಮಾಅತಿನ ಪರ್ಯಟನೆಗೆ ಸಂಬಂಧಿಸಿ ಬದ್‌ಯನ್ ಸಿಂಧ್‌ಗೆ ಬರುತ್ತಿದ್ದಾಗ ಅವರ ಅತಿಥಿ ಸತ್ಕಾರದ ಗುಣ ವಿಶೇಷವಾಗಿ ಕಾಣಬಹುದಾಗಿತ್ತು. ಅವರಿಗೆ ಫುರ್ಖಾನ್ ಫೋರ್ಸಿನಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತ್ತು. 1983ರಿಂದ 2018ರ ತನಕ ಅಲ್‌ಫಝ್ಲ್ ಇಂಟರ್‌ನ್ಯಾಶನಲ್ ಆಫಿಸಿನಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸುತ್ತಿದ್ದರು. ತನ್ನ ಮನೆಯನ್ನು ಆರಂಭದಿಂದಲೇ ಜಮಾಅತಿನ ಫಂಕ್ಷನಿಗಾಗಿ ಸಮರ್ಪಿಸಿದ್ದರು. ಈಗಿನ ಮನೆಯ ಒಂದು ಭಾಗವನ್ನು ನಮಾಝ್ ಸೆಂಟರ್ ಎಂಬ ನೆಲೆಯಲ್ಲಿ ನಿರ್ಮಿಸಿದ್ದಾರೆ. ಅವರಿಗೆ ಪುತ್ರಿಯರು ಮತ್ತು ಪುತ್ರರು ಸಹ ಇದ್ದಾರೆ. ಅವರು ಸಹ ಜಮಾಅತಿನ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಮೊಮ್ಮಕ್ಕಳಲ್ಲಿ ಒಬ್ಬ ಮೊಮ್ಮಗನಾದ ಫರ್‌ಹಾದ್ ಅಹ್ಮದ್ ಯು.ಕೆ.ಯ ಪ್ರೆಸ್ ಎಂಡ್ ಮೀಡಿಯಾದಲ್ಲಿ ಜಮಾಅತಿನ ಮುರಬ್ಬಿಯಾಗಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಸಂತಾನ ಪರಂಪರೆಗೂ ಅವರ ಸತ್ಕರ್ಮಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ಸಿಗಲಿ.

ಮುಂದಿನ ಜನಾಝ಼ ಜರ್ಮನಿಯ ಚೌಧರಿ ಮುನವ್ವರ್ ಅಹ್ಮದ್ ಖಾಲಿದ್ ಸಾಹಿಬ್‌ರದ್ದಾಗಿದೆ. ಆಗಸ್ಟ್ 20ಗೆ 85ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರಿಗೆ ಜಮಾಅತಿನ ವ್ಯವಸ್ಥೆಯೊಂದಿಗೆ ಆಳವಾದ ಸಂಬಂಧವಿತ್ತು. ತಬ್ಲೀಗ್ ಮತ್ತು ತರಬೇತಿ ಕೆಲಸಗಳಲ್ಲಿ ಪೂರ್ಣವಾಗಿ ಭಾಗವಹಿಸುತ್ತಿದ್ದರು. ಜರ್ಮನಿಯಲ್ಲಿ ವಿವಿಧ ಸಮಯಗಳಲ್ಲಿ ಸದರ್ ಮತ್ತು ಜನರಲ್ ಸೆಕ್ರಟರಿ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಅನ್ಸಾರುಲ್ಲಾಹ್‌ದಲ್ಲೂ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಅದಲ್ಲದೆ ಅವರು ಪಾಕಿಸ್ತಾನದಲ್ಲಿದ್ದಾಗ ಅವರಿಗೆ ಅಲ್ಲಿ ತಹ್ರೀಕ್ ಜದೀದಿನ ಭೂಸೊತ್ತುಗಳ ಮ್ಯಾನೆಜರ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯ ಸಿಕ್ಕಿತ್ತು. ಖಿಲಾಫತಿನೊಂದಿಗೆ ಆಳವಾದ ಮತ್ತು ನಿಷ್ಠೆಯ ಸಂಬಂಧವನ್ನು ಹೊಂದಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಐದು ಪುತ್ರರನ್ನು ಮತ್ತು ಆರು ಪುತ್ರಿಯರನ್ನು ಅಗಲಿರುವರು.

ಮುಂದಿನ ಜನಾಝ಼ ಬಾಂಗ್ಲಾದೇಶದ ನಿವೃತ್ತ ಮುಬಲ್ಲಿಗ್‌ರಾದ ಅಹ್ಮದ್ ಸಾದಿಖ್ ತಾಹಿರ್ ಮಹ್ಮೂದ್‌ರ ಪತ್ನಿಯಾದ ನಸೀರ ಬೇಗಮ್‌ರದ್ದಾಗಿದೆ. ನವೆಂಬರ್ 27ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಮಾಜಿ ನ್ಯಾಶನಲ್ ಅಮೀರ್ ಆದ ಸನ್ಮಾನ್ಯ ಮೌಲವಿ ಮುಹಮ್ಮದ್ ಸಾದಿಖ್ ಸಾಹಿಬ್‌ರ ಮಗಳಾಗಿದ್ದರು. ದಿವಂಗತರು ಉಪವಾಸ ಮತ್ತು ನಮಾಝನ್ನು ನಿಯತವಾಗಿ ಅನುಷ್ಠಿಸುವವರಾಗಿದ್ದರು. ಅತಿಥಿ ಸತ್ಕಾರಿ, ಸಹನೆ ಮತ್ತು ಕೃತಜ್ಞತೆಯುಳ್ಳ ಒಬ್ಬ ಸಾತ್ವಿಕ ಸ್ತ್ರೀಯಾಗಿದ್ದರು. ರಮಝಾನಿನಲ್ಲಿ ಯಾವಾಗಲೂ ಪವಿತ್ರ ಖುರ್‌ಆನ್ ಓದಿ ಮುಗಿಸುತ್ತಿದ್ದರು. ಅದಲ್ಲದೆ ಹಲವಾರು ಸ್ವಭಾವ ವೈಶಿಷ್ಟ್ಯಗಳನ್ನು ಹೊಂದಿದ್ದರು.

ಅಲ್ಲಾಹನು ಅವರೊಂದಿಗೆ ಕ್ಷಮೆ ಮತ್ತು ಕಾರುಣ್ಯದೊಂದಿಗೆ ವರ್ತಿಸಲಿ.

ಮುಂದಿನ ಜನಾಝ ರಫೀಉದ್ದೀನ್ ಬಟ್ ಸಾಹಿಬ್‌ರದ್ದಾಗಿದೆ. ಇವರು ಡಿಸೆಂಬರ್ 6ರಂದು 92ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಸಹಾಬಿಯಾದ ಹಝ್ರತ್ ಮೌಲವಿ ಖೈರುದ್ದೀನ್ ಸಾಹಿಬ್‌ರ ಮಗನಾಗಿದ್ದರು. ಅಲ್ಲಾಹನ ಅನುಗ್ರಹದಿಂದ ಯೌವ್ವನದಲ್ಲೇ ವಸಿಯ್ಯತ್ ವ್ಯವಸ್ಥೆಯಲ್ಲಿ ಭಾಗಿಯಾಗುವ ಸೌಭಾಗ್ಯವನ್ನು ಪಡೆದಿದ್ದರು. ವಿವಿಧ ಸ್ಥಳಗಳಲ್ಲಿ ಜಮಾಅತಿನ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ನಾರೋವಾಲ್ ಜಿಲ್ಲೆಯ ಬದೂ ಮಲ್‌ಹಿಯ ಸದರ್ ಜಮಾಅತ್ ಮತ್ತು ವಾಹ್‌ಕೇಂಟ್ ಹಲ್ಕದ ಸದರ್ ಮತ್ತು ಅಮೀರ್ ಆಗಿದ್ದರು. ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಆಗುವ ಸೌಭಾಗ್ಯವನ್ನು ಸಹ ಪಡೆದಿದ್ದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅಲ್ಲಾಹನು ಈ ಎಲ್ಲ ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ, ತನ್ನ ಪ್ರಿಯರ ಸಾಮಿಪ್ಯದಲ್ಲಿ ಇರಿಸಲಿ. ನಮಾಝಿನ ನಂತರ ಇವರ ಜನಾಝ ಗಾಇಬ್ ನಿರ್ವಹಿಸುವೆನು.

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಆಪಾದನೆ ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೂ ಹಚ್ಚುತ್ತಾರೆ. ಸಂಪತ್ತು ಯುದ್ಧಗಳ ಸಂದರ್ಭವಲ್ಲವಾಗಿದ್ದರೂ ದೋಚಿದರು ಎಂದು. ಅಂದ ಹಾಗೆ ಇಂತಹ ಅಪಾದನೆಗಳಿಂದ ಅವರ ಗ್ರಂಥಗಳು ತುಂಬಿ ಹೋಗಿವೆ. (ಅದೇ ಪುಟ 600)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಸತ್ಯ ಮತ್ತು ಮಿಥ್ಯಗಳ ನಡುವೆ ನಿರ್ಣಯ ಕೈಗೊಳ್ಳಲು ಒಂದು ಸಲಹೆಯನ್ನು ನೀಡಿದ್ದಾರೆ.

ಹೇಳಿದರು. "ಇದೀಗ ನಾನು ತನ್ನ ವಾಗ್ದಾನ ಪ್ರಕಾರ ಕೆಳಗೆ ನಮೂದಿತ ಬರಹದಲ್ಲಿ ಇಂತಹದೊಂದು ಮಾನದಂಡ ಸ್ಪಷ್ಟಪಡಿಸಬಯಸುತ್ತೇನೆ. ಅದರಿಂದ ಈ ವಿನೀತನಿಗೆ ಅಲ್ಲಾಹನ ಸಹಕಾರ ಲಭ್ಯವಿದೆ ಮತ್ತು ಹಝ್ರತ್ ಬಟಾಲ್ವಿ ಸಾಹಿಬ್ ಅಪ್ಪಟ ಸುಳ್ಳುಗಾರರು, ದಜ್ಜಾಲರು ಹಾಗೂ ಅಹಂಕಾರಿಗಳ ಸರದಾರರಾಗಿದ್ದಾರೆಂಬುದು ಸ್ಪಷ್ಟವಾಗುವುದು. ಆ ಭಾಷಣ ಹೀಗಿದೆ. ಸಾಕ್ಷ್ಯಗಳು ಮತ್ತು ತತ್ವಜ್ಞಾನಿಗಳು ಹಾಗೂ ಜಾಣ್ಮೆಯುಕ್ತ ಮಾತುಗಳು ಸಹ ದೃಷ್ಟಾಂತಗಳಾಗಿರುತ್ತವೆ. ಅದು ವಿಶೇಷವಾಗಿ ಸಜ್ಜನರಿಗೆ ಮತ್ತು ಅನುಗ್ರಹಿತರಿಗೆ ಲಭ್ಯವಾಗುತ್ತವೆ. ವಚನ ಲಾ ಯಮುಸ್ಸುಹು ಇಲ್ಲಲ್ ಮುತಹರೂನ್ ಮತ್ತು ವಚನ **"ವ ಮೈಂ ಯೂತಲ್ ಹಿಕ್‌ಮಿತ್ ಫಖದ್ ಊತಿಯಾ ಖೈರನ್ ಕಸೀರಾ"** ಉಚ್ಛ ಸ್ವರದಲ್ಲಿ ಸಾಕ್ಷಿ ನೀಡುತ್ತಿವೆ. ಅಂದ ಹಾಗೆ ಅದೇ ದೃಷ್ಟಾಂತ ಮಿಯಾ (ಒ) ಮುಹಮ್ಮದ್ ಹಸೀನ್ ಮತ್ತು ನನ್ನ ಸತ್ಯ ಹಾಗೂ ಮಿಥ್ಯಗಳ ನಡುವೆ ಸ್ಪಷ್ಟವಾದ ಸಾಕ್ಷ್ಯಗಳಾಗುವುವು. ಈ ನಿರ್ಣಯಕ್ಕಾಗಿ ಅತ್ಯುತ್ತಮ ವ್ಯವಸ್ಥೆ ಹೀಗೆ ಮಾಡಬಹುದು. ಒಂದು ಸಣ್ಣದಾದ ಸಭೆ ಸೇರಿ ನಿರ್ಣಾಯಕರು ಸೂಚಿಸಿದ ಪವಿತ್ರ ಖುರ್‌ಆನ್‌ನ ಕೆಲ ವಚನಗಳನ್ನು ಆಯ್ದು ಕೊಡುವಂತಾಗಲಿ. ಮತ್ತೆ ಅಂದಾಜಿನ ಪ್ರಕಾರ ಒಂದು ಅಧ್ಯಾಯ ಅವುಗಳಿಂದ ತೆಗೆದು ಅದರ ವ್ಯಾಖ್ಯಾನವನ್ನು ಪರೀಕ್ಷೆಗೆ ಎಂದು ಆರಿಸಿಕೊಳ್ಳಬೇಕು. ಈ ವ್ಯಾಖ್ಯಾನಕ್ಕಾಗಿ ಅರ್ಥಗರ್ಭಿತವಾದ ಸಾಹಿತ್ಯಕ ಭಾಷೆಯಲ್ಲಿ ಅರಬಿ ಭಾಷೆಯಲ್ಲಿ ಬರೆದುಕೊಡಬೇಕು. ಅದು ಹತ್ತು ಭಾಗಕ್ಕಿಂತ ಕಡಿಮೆಯಾಗಿರಬಾರದು. ಅವುಗಳ ಸಾಕ್ಷ್ಯಗಳು ಮತ್ತು ಜ್ಞಾನವು ಸಾಧಾರಣ ರೀತಿಯದ್ದಾಗಿರಬಾರದು, ಬದಲು ಆಧುನಿಕ ರೀತಿಯ ತತ್ವಜ್ಞಾನಗಳನ್ನು ಹೊಂದಿರಬೇಕು ಅವು ಇತರರ ಗ್ರಂಥಗಳಲ್ಲಿ ಲಭ್ಯವಿರಬಾರದು. ಮತ್ತು ಪವಿತ್ರ ಖುರ್‌ಆನ್‌ನ ಅಸಲಿಗೆ ಧಕ್ಕೆ ತರುವಂತಿರಬಾರದು. ಬದಲು ಅದರ ಮಹಿಮೆ ಎತ್ತಿ ತೋರಿಸುವಂತಿರಬೇಕು. ಗ್ರಂಥದ ಕೊನೆಯಲ್ಲಿ ಒಂದು ನೂರು ಕವನ ಸಾಲುಗಳು ಸೂಕ್ಷ್ಮ ಸಾಹಿತ್ಯಕ ರೀತಿಯಲ್ಲಿ ಅರಬಿಯಲ್ಲಿ ನುಅತ್ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ಅವರ ಗುಣಗಳ ಆಧಾರಿತ ಖಸೀದ್ ಬರೆಯಬೇಕು. ಅವುಗಳ ಗುಣಮಟ್ಟದ ಮೌಲ್ಯಮಾಪನವು ಅದೇ ಸಭೆಯಲ್ಲಿ ಆಗಬೇಕು. ಉಭಯಸ್ತರಿಗೆ ಈ ಕೆಲಸಕ್ಕಾಗಿ ನಲವತ್ತು ದಿನಗಳ ಅವಧಿ ನೀಡಬೇಕು. ನಲವತ್ತು ದಿನಗಳ ನಂತರ ಸಾರ್ವಜನಿಕ ಸಭೆಯಲ್ಲಿ ಉಭಯತ್ರರು ತಮ್ಮ ತಮ್ಮ ವ್ಯಾಖ್ಯಾನ ಮತ್ತು ತಮ್ಮ ತಮ್ಮ ಕವನ ಸಾಲುಗಳನ್ನು ಅದು ಅರಬಿಯಲ್ಲಿರಬೇಕು. ಆಲಿಸಿಕೊಡಬೇಕು. ಅವರಿಗಿಂತ ಗುಣಮಟ್ಟದಲ್ಲಿ ಕಡಿಮೆಯದ್ದಾದರೆ ಅಥವಾ ಶೇಖ್ ಮುಹಮ್ಮದ್ ಹುಸೇನನ ಸರಿಸಮಾನನಾದರೆ ಅದೇ ಸಮಯ ಈ ವಿನೀತನು ತನ್ನ ತಪ್ಪನ್ನು ಒಪ್ಪಿಕೊಳ್ಳುವೆನು. ಮತ್ತು ತಮ್ಮ ಗ್ರಂಥಗಳನ್ನು ಸುಟ್ಟು ಹಾಕುವೆನು. ಆಗ ಶೇಖ್ ಮುಹಮ್ಮದ್ ಹಸೀನರಿಗೆ ಹಕ್ಕಿರುವುದು. ಕೊರಳಿಗೆ ಹಗ್ಗ ಹಾಕಿ ಹೇಳಳೀ, ಓ ಸುಳ್ಳುಗಾರನೇ, ಓ ದಜ್ಜಾಲ್‌ರ ಮಿಥ್ಯವಾದಿ ಇಂದು ನಿನ್ನ ಬಂಡವಾಳ ಬಯಲಾಗಿದೆ. ಇದೀಗ ಆ ಮಾತು ಎಲ್ಲಿ ಹೋಯಿತು. ನೀನು ಹೇಳುತ್ತಿದ್ದೆ. ದೇವನು ನನ್ನ ನೆರವಿಗೆ ಇದ್ದಾನೆ ಎಂದು. ಈಗ ಹೇಳು, ನಿನ್ನ ದೇವವಾಣಿಯ ಬಗ್ಗೆ, ನಿನ್ನ ದೇವವಾಣಿಗಳು ಹಾಗೂ ನಿನ್ನ ಪವಾಡಗಳು ಎಲ್ಲಿವೆ ಮತ್ತು ಅವು ಎಲ್ಲಿ ಅಡಗಿ ಕುಂತಿವೆ. ಆದರೆ ಈ ವಿನೀತನು ವಿಜಯಿಯಾದರೆ ಮಿಯಾ ಮುಹಮ್ಮದ್ ಹಸೀನನು ಸಭೆಯಲ್ಲಿ ನಿಂತು ಈ ಪದಗಳಿಂದ ಕ್ಷಮೆಯಾಚಿಸಬೇಕು. ಓ ಉಪಸ್ಥಿತರೇ! ಇಂದು ನನ್ನ ಬಂಡವಾಳ ಬಯಲಾಗಿದೆ. ಸೂರ್ಯನಂತೆ ಸತ್ಯ ಬಯಲಾಗಿದೆ. ಮತ್ತು ಈ ವ್ಯಕ್ತಿ ಸತ್ಯವಂತನೆಂದು ಸಾಬೀತಾಗಿದೆ, ನಾನೇ ದಜ್ಜಾಲಾಗಿದ್ದೇನು, ನಾನೇ ಅಧರ್ಮಿಯಾಗಿದ್ದೇನು. ಇದೀಗ ನಾನು ಕ್ಷಮೆ ಯಾಚಿಸುತ್ತೇನೆ. ಎಲ್ಲರೂ ಸಾಕ್ಷಿಯಾಗಿರಿ. ಅದಾದ ನಂತರ ಅದೇ ಸಭೆಯಲ್ಲಿ ತನ್ನ ಗ್ರಂಥಗಳನ್ನು ಸುಟ್ಟು ಹಾಕಿ ಸೇವಕರ ಹಾಗೆ ನನ್ನನ್ನು ಹಿಂಬಾಲಿಸಲಿ. (ಅದೇ ಪುಟ 601–603).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. "ಈಗ ಮಹನಿಯರೇ! ನಾನೇನಾದರೂ ತನ್ನ ದೃಷ್ಟಾಂತಗಳಲ್ಲಿ ಸುಳ್ಳುಗಾರನೆಂತಾದರೆ ಅಥವಾ ಮೈದಾನ ಬಿಟ್ಟು ಓಡಿ ಹೋಗುವವನಾದರೆ, ಅಲ್ಲ ಸಲ್ಲದ ನೆಪಗಳನ್ನು ಹೇಳಿ ತಪ್ಪಿಸಿಕೊಳ್ಳುವವನಾದರೆ ನೀವೆಲ್ಲರೂ ಸಾಕ್ಷಿಯಾಗಿರಿ. ಆಗ ನಾನು ನಿಸ್ಸಂಶಯವಾಗಿಯೂ ಸುಳ್ಳುಗಾರ ಮತ್ತು ದಜ್ಜಾಲ್ ಎಂದಾಗುವೆನು. ಆಗ ನಾನು ಯಾವುದೇ ಶಿಕ್ಷೆಗೆ ಅರ್ಹನಾಗುವೆನು. ಏಕೆಂದರೆ ಆ ಸಂದರ್ಭದಲ್ಲಿ ಎಲ್ಲ ರೀತಿಯಿಂದ ನನ್ನ ಸುಳ್ಳು ಸಾಬಿತಾಗಬಹುದು. ನನ್ನ ಪ್ರಾರ್ಥನೆಗಳ ಅಸ್ವೀಕಾರಿಕೆ, ಬಹಿರಂಗಗೊಂಡು ನನ್ನ ದೇವವಾಣಿಗಳ ಮಿಥ್ಯವಾಗಿರುವುದು ಎಲ್ಲರ ಮೇಲೆ ಜಾಹಿರಾಗುವುದು. ಆದರೆ ಮಿಯಾ (ಒ) ಬಟಾಲ್ವಿ ಸೋಲುವವರಾದರೆ ಅವರ ಅಪಮಾನ ಮತ್ತು ನಾಚಿಕೆಗೇಡುತನ. ಇದೀಗ ಅವರ ಇಂತಹ ಸ್ಪಷ್ಟ ನಿಲುವುಗಳನ್ನು ಮಾನ್ಯ ಮಾಡದಿದ್ದರೆ ಮತ್ತು ಪಲಾಯನಗೈದರೆ ಮತ್ತು ತಪ್ಪನ್ನು ಒಪ್ಪಿಕೊಳ್ಳದಿದ್ದರೆ ಖಂಡಿತವಾಗಿಯೂ ತಿಳಿದುಕೊಳ್ಳಿರಿ. ಅಲ್ಲಾಹನ ನ್ಯಾಯಾಲಯದಲ್ಲಿ ಈ ಕೆಳಗೆ ನಮೂದಿತ ಪಾರಿತೋಷಕಗಳಿವೆ.

(1)ಶಾಪ (ಲಅ್‌ನತ್) 2) ಶಾಪ 3) ಶಾಪ 4) ಶಾಪ 5) ಶಾಪ 6) ಶಾಪ 7) ಶಾಪ 8) ಶಾಪ 9) ಶಾಪ, 10) ಶಾಪ, **ತಿಲಕ್ ಅಶ್ರತುನ್ ಕಾಮಿಲತುನ್"** (ಅದೇ ಪುಟ 604)

ಮುಹಮ್ಮದ್ ಹುಸೇನ್ ಬಟೌಲ್ವಿ ವಿವಿಧ ನೆಪಗಳನ್ನು ಒಡ್ಡಿ ಅಲ್ಲ ಸಲ್ಲದ ಶರತ್ತುಗಳನ್ನು ಹಾಕಿ ಸ್ಪರ್ಧೆಯಿಂದ ಪಲಾಯನ ಮಾಡಿದರು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಇವೆಲ್ಲ ನೆಪಗಳನ್ನು ನಿವಾರಿಸಲು ಪರಿಪೂರ್ಣ ರೀತಿಯ ನ್ಯಾಯ ತೀರ್ಮಾಣಕ್ಕಾಗಿ ಹಾಗೂ ಯಾರ ಮನಸ್ಸಿನಲ್ಲಾದರೂ ಏನಾದರೂ ಸಂಶಯಗಳಿದ್ದರೆ ದೂರವಾಗಲಿ ಎಂಬ ಉದ್ದೇಶದಿಂದ ಕರಾಮತು ಸ್ಸಾದಿಖೀನ್ ಬರೆದರು. ಮತ್ತು ಅದರ ಪ್ರತಿರೂಪ ತರಲು ಒಂದು ಸಾವಿರ ರೂಪಾಯಿಗಳ ಬಹುಮಾನ ನಿಗದಿಪಡಿಸಿದರು. ಅದರ ವಿವರ ಇನ್‌ಶಾಅಲ್ಲಾಹ್ ನಾವು ಮುಂದಿನ ಸಂಚಿಕೆಯಲ್ಲಿ ಮಾಡುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ನಿಯಮಗಳನ್ನು ಮಾಡಿ ಬಿಟ್ಟಿರುವನು. ಅದರನ್ವಯ ಲೋಕಸೃಷ್ಟಿಯಾಗಿದೆ. ಹೀಗಿರುವಾಗ ನಿಮ್ಮ ಮಿಥ್ಯ ದೇವರುಗಳಿಗೆ ಇಲ್ಲಿ ಯಾವ ಕೆಲಸವಿದೆ ಮತ್ತು ಅದರ ಅವಶ್ಯಕತೆ ಏನಿದೆ?

ಈ ವಚನದಲ್ಲಿ ಸೂಚಿಸಲಾಗಿದ್ದೇನೆಂದರೆ ಯಾವ ಮಾಲೀಕನು ಒಂದು ಅಪರಿಮಿತ ಸೃಷ್ಟಿ ಸೃಷ್ಟಿಸಿರುವನೋ ಅವನು ಅದರ ಉಸ್ತುವಾರಿ ಇನ್ನೊಬ್ಬನಿಗೆ ಬಿಟ್ಟುಕೊಡುವುದಾದರೂ ಹೇಗೆ? ಅಥವಾ ಒಂದು ಕಾಲದ ಜನರಿಗೆ ಮಾರ್ಗದರ್ಶನ ನೀಡಿ ಇತರ ಸಮುದಾಯಗಳಿಗೆ ವಂಚಿಸಲು ಹೇಗೆ ಸಾಧ್ಯ? ಸೃಷ್ಟಿಕರ್ತ ಒಬ್ಬನು, ಸೃಷ್ಟಿ ಜಾರಿಯಲ್ಲಿರಿಸಿದವನು ಇನ್ನೊಬ್ಬನು ಎಂದಾರು ಹೇಳಬಹುದು. ಸೃಷ್ಟಿಕರ್ತನು ಪ್ರಾಥಮಿಕ ಹಂತದಲ್ಲೇ ಮಾರ್ಗದರ್ಶನ ನೀಡಿದ್ದನು. ಆದರೆ ಸೃಷ್ಟಿ ಜಾರಿಯಲ್ಲಿರಿಸಿದವನನ್ನು ಲೆಕ್ಕಕ್ಕಿಡಲಿಲ್ಲ. ಸೃಷ್ಟಿಕರ್ತನೂ ಮತ್ತು ಸೃಷ್ಟಿಯ ಉಸ್ತುವಾರಿ ವಹಿಸಿದವನು ಒಬ್ಬನೇ ಆಗಿದ್ದರೆ ನಂತರ ಬರುವ ಜನಾಂಗಗಳು ಹೇಗೆ ಮಾರ್ಗದರ್ಶನದಿಂದ ವಂಚಿತರಾಗಲು ಸಾಧ್ಯ.

**(ತಫ್ಸೀರ್ ಕಬೀರ್ ಸಂಪುಟ 3, ಪುಟ 72, ಮುದ್ರಣ ಖಾದಿಯಾನ್ 2010)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂ. 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)***

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 25 February 2021, Issue No. 08

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 07ರ ವರದಿಯ ಉಳಿದ ಭಾಗ)**

**3 ಜೂನ್ 2015 ಬುಧವಾರ**

ಹುಝೂರ್(ಅಬಿಅ) ಮುಂಜಾನೆ ನಾಲ್ಕೂವರೆ ಗಂಟೆಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಪತ್ರಗಳು, ವರದಿಗಳು ಮತ್ತು ಕಚೇರಿ ಅಂಚೆಗಳನ್ನು ಪರಿಶೀಲಿಸಿದರು. ಮತ್ತು ನಿರ್ದೇಶನಗಳನ್ನು ನೀಡಿದರು. ಹುಝೂರ್ ವಿವಿಧ ಕಚೇರಿ ಕಾರ್ಯಗಳಲ್ಲಿ ತೊಡಗಿದರು.

**ವೈಯಕ್ತಿಕ ಹಾಗೂ ಕುಟುಂಬ ಭೇಟಿಗಳು**

ಕಾರ್ಯಕ್ರಮದನ್ವಯ 12.15 ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕುಟಂಬ ಭೇಟಿಗಳ ಕಾರ್ಯಕ್ರಮ ಪ್ರಾರಂಭವಾಯಿತು.

ಇಂದು ಮುಂಜಾನೆಯ ಈ ಅಧಿವೇಶನದಲ್ಲಿ 41 ಕುಟುಂಬಗಳ 162 ಜನರು ತಮ್ಮ ಪ್ರೀತಿಯ ಇಮಾಮರ ಜೊತೆ ಭೇಟಿಯಾಗುವ ಭಾಗ್ಯ ಪಡೆದರು.

ಹುಝೂರ್ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿ ನೀಡಿದರು. ಮತ್ತು ಸಣ್ಣ ಮಕ್ಕಳಿಗೆ ಚಾಕ್ಲೇಟ್‌ಗಳನ್ನು ನೀಡಿದರು.

ಭೇಟಿಯ ಭಾಗ್ಯ ಪಡೆದವರೆಲ್ಲರು ಫ್ರೆಂಕ್‌ಫರ್ಟ್ ಜಮಾಅತುಗಳ, ನಗರಗಳಿಂದ ಬಂದ ಕುಟುಂಬಗಳು ಮತ್ತು ಬಂಧುಗಳಲ್ಲದೇ ವಿವಿಧ ಜಮಾಅತುಗಳ ಹಾಗೂ ನಗರಗಳಿಂದ ಬಂದ ಕುಟುಂಬಗಳು ಭಾಗವಹಿಸಿದ್ದರು. ಅವರಲ್ಲಿ ಕಾಸಿಲ್‌ನಿಂದ 200 ಕಿ.ಮೀ, ಆಖನ್‌ನಿಂದ 267 ಕಿ.ಮೀ ಪ್ರಯಾಣ ಬೆಳೆಸಿ ಬಂದು ತಲುಪಿದರು. ಅವರೆಲ್ಲರೂ ತಮ್ಮ ಪ್ರೀತಿಯ ನೇತಾರರೊಡನೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಪ್ರತಿಯೊಬ್ಬರು ಅವರಿಂದ ಅನುಗ್ರಹಿತರಾಗಿ ಹೊರಗೆ ಬಂದರು. ಅಸ್ವಸ್ತರು ತಮ್ಮ ಸ್ವಾಸ್ಥ್ಯಕ್ಕಾಗಿ ದುಆ ಯಾಚಿಸಿದರು. ಕಷ್ಟಗಳಲ್ಲಿ ಸಿಲುಕಿದರು ಮತ್ತು ವಿವಿಧ ಸಮಸ್ಯೆಗಳಲ್ಲಿ ಸಿಲುಕಿದವರು ತಮ್ಮ ಕಷ್ಟ ಕಾರ್ಪಣ್ಯಗಳನ್ನು ದೂರವಾಗುವಂತೆ ದುಆ ಯಾಚಿಸಿದರು ಮತ್ತು ಮನಃಶಾಂತಿಯನ್ನು ಪಡೆದು ನಗು ಮುಖದೊಂದಿಗೆ ಹೊರಗೆ ಬದರು. ಕೆಲವರು ತಮ್ಮ ವಿವಿಧ ಸಮಸ್ಯೆಗಳ ಹಾಗೂ ವ್ಯಾಪಾರದಲ್ಲಿ ಮಾರ್ಗದರ್ಶನ ಪಡೆದರು. ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ಪರೀಕ್ಷೆಗಳ ಉತ್ತೀರ್ಣತೆಗೋಸ್ಕರ ತಮ್ಮ ಪ್ರೀತಿಯ ಇಮಾಮರಿಂದ ದುಆ ಪಡೆದರು. ಒಟ್ಟಿನಲ್ಲಿ ಎಲ್ಲರೂ ತಮ್ಮ ಪ್ರಿಯ ಇಮಾಮರ ದುಆಗಳನ್ನು ಪಡೆದು ಧನ್ಯರಾದರು. ದುಆಗಳಿಂದ ಪುನೀತರಾಗಿ ತಮ್ಮ ಕಷ್ಟ ಕಾರ್ಪಣ್ಯಗಳ ಬದಲು ಸುಖ ಶಾಂತಿ ಪಡೆದು ಈ ಅನುಗ್ರಹಿತ ಕ್ಷಣಗಳಿಂದ ಲಾಭಾನ್ವಿತರಾದರು. ಭೇಟಿಗಳ ಈ ಕಾರ್ಯಕ್ರಮ 2.30 ಗಂಟೆಯವರೆಗೆ ನಡೆಯಿತು.

ಅನಂತರ ಹುಝೂರ್ ಝುಹರ್, ಅಸರ್ ನಮಾಝುಗಳನ್ನು ನಿರ್ವಹಿಸಲು ಆಗಮಿಸಿದರು.

**ಉಪಸ್ಥಿತ ಹಾಗೂ ಅನುಪಸ್ಥಿತ ಜನಾಝಾ ನಮಾಝುಗಳು**

ನಮಾಝುಗಳ ನಿರ್ವಹಣೆಗಿಂತ ಮುಂಚೆ ಹುಝೂರ್ ಕೆಳಗೆ ನಮೂದಿತ ಮೂರು ಉಪಸ್ಥಿತ ಜನಾಝಾ ಹಾಗೂ ನಾಲ್ಕು ಅನುಪಸ್ಥಿತ ಜನಾಝು ನಮಾಝ್ ನಿರ್ವಹಿಸಿದರು.

**ಉಪಸೀತ ಜನಾಝು:**

1. ಮಾನ್ಯ ಮಯಹಮ್ಮದ್ ಯೂಸುಫ್ ಬಕರ್ ಸಾಹಿಬ್ (ಜಮಾಅತ್ ಮುನ್‌ಹಾಎಮ್ ಜರ್ಮನಿ) ದಿವಂಗತರು ಒಂದನೆಯ ಜೂನ್ 2015 ರಂದು 70 ವರ್ಷ ವಯಸ್ಸಿನಲ್ಲಿ ನಿಧನ ಹೊಂದಿದರು. **ಇನ್ನಲಿಲ್ಲಾಹಿ ವ ಇನ್ನ ಇಲೈಹಿ ರಾಜಿವೂನ್,** ಅವರು ಮುಕರ್‍ರಮ್ ಸಯ್ಯದ್ ಕಮಾಲ್ ಯೂಸೂಫ್ ಸಾಹಿಬ್ ಮಾಜಿ ಮುಬಲ್ಲಿಗ್ ಸ್ಕಂಡೆ ನ್ಯೂಯಿಯು ಅವರ ಖಾಸಾ ಸಂಬಂದಿಯಾಗಿದ್ದರು.

2. ಮಾನ್ಯ ಲತೀಫ್ ಅಹ್ಮದ್ ಸಾಹಿಬ್ (ಮನ್‌ಹ್ಯಾಮ್ ಜರ್ಮನಿ) ದಿವಂಗತರು 1 ಜೂನ್ 2015ರಂದು 75 ವರ್ಷ ವಯಸ್ಸಿನಲ್ಲಿ ನಿಧನರಾದರು. **ಇನ್ನಲಿಲ್ಲಹಿ ವ ಇನ್ನ ಇಲೈಹಿ ರಾಜೊಊನ್** ಒಂದು ದೀರ್ಘ ಸಮಯದವರೆಗೆ ವಾಯಪಾಡ್‌ನಲ್ಲಿ ನೌಕರಿ ಸಂಬಂಧವಾಗಿ ಸೂಬ ಸರ್ಹದ್‌ನಲ್ಲಿ ನೆಲೆಸಿದ್ದರು. ಅಲ್ಲಿ ಹಲವು ಸಲ ಜರ್ಮ ಅವರಿಗೆ ಜಮಾಅತಿನ ವಿರೋಧಿಗಳಿಂದ (ಹಲ್ಲೆನಡೆದಿತ್ತು) ಪ್ರಾಣಾಪಾಯವಾಗಿತ್ತು. ಸೆಪ್ಟೆಂಬರ್ 2014 ರಲ್ಲಿ ಅಸ್ವಸ್ಥ ರೀತಿಯಲ್ಲಿ ಜರ್ಮನಿಗೆ ಬಂದಿದ್ದರು.

3. ಅಝೀಝುಂ ಸಾರಮ್ ಅಫ್ರೋಝ್ (ಇಬ್ನ ಮುಕರ್‍ರಮ್ ನಾದಿರ್ ಅಲ್ತಾಫ್ ಸಾಹಿಬ್ ಜರ್ಮನಿ) ಜೂನ್ 2015 ರಂದು ಮೂರು ವಾರಗಳ ಆಸ್ಪತ್ರೆಯ ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. **ಇನ್ನಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**

**ಜನಾಝಾ ಅನುಪಸ್ಥಿತಿ:**

1. ಮುಕರ್‍ರಮ್ ಸಅದಿಯಾ ಫಖರ್ ಸಾಹಿಬ (ಪುತ್ರಿ ಮುಕರ್‍ರಮ್ ಅನ್ವರುಲ್ ಹಖ್ ಸಾಹಿಬ್ ರಖ್ವಾ) 15 ಏಪ್ರಿಲ್ 2015 ರಂದು 28 ವರ್ಷ ವಯಸ್ಸಿನಲ್ಲಿ ಕೊರಳಿನ ಬೇನೆಯ ಜ್ವರದಿಂದಾಗಿ ನಿಧನರಾದರು. **ಇನ್ನಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತೆ ನುಸ್ರತ್ ಜಹಾನ್ ಕಾಲೇಜಿನಲ್ಲಿ ಶಿಕ್ಷಕಿಯಾಗಿ ಹಾಗೂ MTA ಯಲ್ಲಿ ಸಹಾಯಕಿಯಾಗಿ, ಅಲ್ಲದೇ ನೆರೆಹೊರೆಯವರಲ್ಲಿ ಸಕ್ರಿಯ ಸದಸ್ಯರಾಗಿದ್ದರು. ಪವಿತ್ರ ಖುರ್‌ಆನ್‌ನ ಅನುವಾದ ತರಗತಿಯು ಕ್ರಮಬದ್ಧವಾಗಿ ನಡೆಸುತ್ತಿದ್ದರು. ದಿವಂಗತೆ ಮೂಸಿಯಾಗಿದ್ದರು.

2. ಮುಕರ್‍ರಮ್ ಮುನೀರುದ್ದೀನ್ ಸಾಹಿಬ್ (ಇಬ್ನು ಮುಕರ್‍ರಮ್ ಅಹ್ಮದ್ ದೀನ್ ಸಾಹಿಬ್, ಲಾಹೋರ್), 13 ಜನವರಿ, 2013 ರಂದು 78 ವರ್ಷ ವಯಸ್ಸಿನಲ್ಲಿ ನಿಧನರಾದರು. **ಇನ್ನಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತರು ಕರಾಚಿಯಲ್ಲಿ ಮಾಲ್ ವಿಭಾಗದಲ್ಲಿ ದೀರ್ಘ ಸಮಯದವರೆಗೆ ಸೇವೆಯಲ್ಲಿದ್ದರು. ಚಂದಗಳಲ್ಲಿ ಪ್ರಮಾಣಿಕರಾಗಿದ್ದರು. ಮತ್ತು ಇತರ ಸಾಂಪತ್ತಿಕ ತ್ಯಾಗಗಳಲ್ಲಿ ಮುಂದಿದ್ದರು. ಖಿಲಾಫತ್‌ನೊಂದಿಗೆ ಆತ್ಮೀಯ ಸಂಬಂಧವಿತ್ತು. ಆತ್ಮೀಯರು ಮತ್ತು ನಿಷ್ಠಾವಂತರಾಗಿದ್ದರು. ಪವಿತ್ರ ಖುರ್‌ಆನ್ ಉಚ್ಚಸ್ವರದಿಂದ ಪಠಿಸುತ್ತಿದ್ದರು.

3. ಮುಕರ್‍ರಮ್ ಮಹಮ್ಮದ್ ಮುನೀರ್ ಅಖ್ತರ್ ಸಾಹಿಬ್ (ಕೆನಡ) 16 ಮೇ 2015 ರಂದು 84 ವರ್ಷ ವಯಸ್ಸಿನಲ್ಲಿ ಟೊರಾಂಟೊ, ಕೆನಡಾದಲ್ಲಿ ನಿಧನರಾದರು. **ಇನ್ನಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ದಿವಂಗತರು 2001 ರಲ್ಲಿ ಇಸ್ಲಾಮಾಬಾದ್ ಪಾಕಿಸ್ತಾನದಿಂದ ಕೆನಡಾ ಬಂದಿದರು. ಹತ್ತು ವರ್ಷದವರೆಗೆ ಬೈತುಲ್ ಇಸ್ಲಾಮ್ ಮಿಷನ್ ಹೌಸಿನಲ್ಲಿ ಸ್ವಯಂ ಸೇವಕರಾಗಿ ಅತ್ಯಂತ ಶ್ರಮವಹಿಸಿ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದರು. ಅದಕ್ಕಿಂತ ಮುಂಚೆ ಇಸ್ಲಾಮಾಬಾದಿನಲ್ಲಿ ಉಮ್ರೆ ಖಾರ್‌ಜಾ ಸೆಕ್ರೆಟರಿ ಸೇವೆಯಲ್ಲಿದ್ದರು.

4. ಮುಕರ್‍ರಮ್ ಅನ್ವಾರುಲ್ಲಾಹ್ ಖಾನ್ ಸಾಹಿಬ್ (ಇಬ್ನು ಮುಕರ್‍ರಮ್ ರಾಯೆ ಶಂಶೀರ್ ಅಲಿ ಖಾನ್ ಸಾಹಿಬ್, ಮಹದಿಯಾಬಾದ್, ಜರ್ಮನಿ) ದಿವಂಗತರು 47 ವರ್ಷ ವಯಸ್ಸಿನಲ್ಲಿ ಒಂದು ಟ್ರಕ್ಕಿನ ಅಪಘಾತದಲ್ಲಿ ನಿಧನರಾದರು. **ಇನ್ನಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರು ಅತ್ಯಂತ ಸಮಾಜಮುಖಿ, ನಿಸ್ವಾರ್ಥ ಸೇವೆ ಸಲ್ಲಿಸುವವರಾಗಿದ್ದರು. ಖಿಲಾಫತ್ ಅಹ್ಮದಿಯಾದ ತ್ಯಾಗಮಯಿ ಜೀವಿಯಾಗಿದ್ದರು. ಜರ್ಮನಿಗೆ ಬರುವ ಮುಂಚೆ ರಬ್ವಾದ ಒಂದು ಮಸೀದಿಯಲ್ಲಿ ಶಿಕ್ಷಣಾ ಸೇವೆಯಲ್ಲಿದ್ದು ಮೌಲ್ವಿಗಳ ಕಲ್ಲು ತೂರಾಟದಲ್ಲಿ ಗಾಯಗೊಂಡಿದ್ದರು. ಆದರೆ ಉಲ್ಟಾ ಅವರ ವಿರುದ್ಧವೇ ಕೇಸು ಹಾಕಲಾಯಿತು. ಮತ್ತು ಆಸ್ಪತ್ರೆ ಕರೆದುಕೊಂಡು ಹೋಗುವ ಬದಲು ಸೆರೆಹಿಡಿದು ಜೈಲಿಗೆ ಹಾಕಲಾಯಿತು. ಹೀಗೆ ಅವರಿಗೆ ಅಲ್ಲಾಹನ ಮಾರ್ಗದಲ್ಲಿ ಸೆರೆವಾಸ ಅನುಭವಿಸುವ ಗೌರವ ಲಭಿಸಿತು. ಮಹದಿ ಆಬಾದಿನಲ್ಲಿ ಖಾಯಿದ್ ಖುದ್ದಾಮುಲ್ ಅಹ್ಮದಿಯಾ ಅಲ್ಲದೇ ಇತರ ಸೇವೆಗೈಯ್ಯುವ ಭಾಗ್ಯ ಪಡೆದಿದ್ದರು.

ಅಲ್ಲಾಹನು ಎಲ್ಲ ದಿವಂಗತರಿಗೆ ಮಸ್ಗಿಗ್‌ಫರತ್ ನೀಡುವಂತಾಗಲಿ. ಮತ್ತು ತನ್ನ ಸಾನಿಧ್ಯದ ಸ್ವರ್ಗದಲ್ಲಿ ಜಾಗ ನೀಡುವಂತಾಗಲಿ.

ಅಲ್ಲಾಹನು ಅವರ ಸಂಬಂಧಿಕರಿಗೆ ಸಬ್ರ್ ನೀಡಲಿ ಮತ್ತು ಅಗಲಿದವರ ಸತ್ಕಾರ್ಯಗಳನ್ನು ಜೀವಂತಪಡಿಸುವ ಭಾಗ್ಯ ದಯಪಾಲಿಸಲಿ. ಆಮೀನ್.

ಅನಂತರ ಹುಝೂರ್ ನಮಾಝ್ ಝುಹರ್ ಅಸರ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.